ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor: MARUTIBASAVANTAPPAHOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 06 | Issue : 289 | Saturday 27-07-2024 | E-mail : maruti.b.hosamani76@gmail.com | Page: 4 | Price : Rs. 1/-

ಬಡ ರೈತರನ್ನು ಒಕ್ಕಲೆಬ್ಬಿಸುವ ಕೆಲಸ ನಡೆದರೆ ಉಗ್ರವಾದ ಹೋರಾಟ ಖಚಿತ–ರೈತ ಮುಖಂಡ ದೇವರಮನೆ ಮಹೇಶ್ ಆಕ್ರೋಶ

ಕೂಡ್ಲಿಗಿ : ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕೂಡ್ಲಿಗಿ ಪಟ್ಟಣದ ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆಯಿಂದ ರೈತರನ್ನು ಒಕ್ಕಲೆಬಿಸದೆ ಸರ್ಕಾರಿ ಹಳ್ಳ ಪರಂ ಪೋಕ್ ಎಂದು ಬೋರ್ಡ್ ಹಾಕಿ ರೈತರನ್ನು ದಿಕ್ಕು ದೋಚದಂತೆ ಕಂಗಲ್ಲಾಗಿದ್ದಾರೆ ರೈತರು ಇದರ ವಿರುದ್ಧ ಕೂಡ್ಲಿ–ಗಿಯ ಗಾಂಧೀಜಿ ಚಿತ್ತಾ ಭಸ್ಮ ದಿಂದ ಪ್ರತಿಭಟನೆ ರ್ಯಾಲಿಯನ್ನು ಹಮ್ಮಿಕೊಂಡಿದ್ದು ಪಟ್ಟಣದ ಪ್ರಮುಖ ರಸ್ತೆಗಳ ಮೂಲಕ ತಾಲೂಕು ಕಚೇರಿಗೆ ಮನವಿ ಕೊಡಲಾಯಿತು. ಈ ಸಂದರ್ಭದಲ್ಲಿ ಹತ್ತಾರು ರೈತ ಮುಖಂಡರು ಸರ್ಕಾರ ದ ವಿರುದ್ಧ ಘೋಷಣೆಗಳ ಕೂಗುತ್ತಾ ರೈತರನ್ನು ಒಕ್ಕಲೆಬೀಸ ಬಾರದೆಂದು ಪ್ರತಿಭಟನೆ ಮಾಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ದೇವರ ಮನೆ ಮಹೇಶ್ ರವರು ಮಾನ್ಯ ತಹಸೀಲ್ದಾರ್ ರೇಣುಕಾ ಇವರ ಮುಖಂತರ ಮಾನ್ಯ ಬಿ ಝೆಡ್ ಜಮೀರ್ ಅಹ್ಮದ್ ಖಾನ್ ವಿಜಯನಗರ ಜಿಲ್ಲಾ ಉಸ್ತುವಾರಿ ಗಳು ಹಾಗೂ ವಸತಿ ಸಚಿವರು ಇವರಿಗೆ ಹಾಗೂ ಮಾನ್ಯ ಎನ್ ಟಿ ಶ್ರೀನಿವಾಸ್ ಕೂಡ್ಲಿಗಿ ಶಾಸಕರ ಆಪ್ತ ಸಹಾಯಕರಾದ ಮರಳುಸಿದ್ದಪ್ಪ ರವರಿಗೆ ಹತ್ತಾರು ರೈತ ಮುಖಂಡರು ಮನವಿ ಪತ್ರ ಕೊಡುವುದರ ಮೂಲಕ ಸಾಗುವಳಿ ರೈತರಿಗೆ ಒಕ್ಕಲೆಬ್ಬಿಸ ಬಾರದೆಂದು ಹಾಗೂ ತಾಲೂಕಿನಲ್ಲಿ ಅನೇಕ ರೈತರು ಪಾರಂ 57 ಅರ್ಜಿಗಳನ್ನು ಸಲ್ಲಿಸಿದ್ದು ಆದಷ್ಟು ಬೇಗನೆ ರೈತರಿಗೆ ಪಟ್ಟಗಳನ್ನು ನೀಡಬೇಕು ಎನ್ನುವುದು ಬೇಡಿಕೆಯಾಗಿತ್ತು,

ಈ ಸಂದರ್ಭದಲ್ಲಿ ಸರ್ವೇ ನಂಬರ್ 594 ಹಾಗೂ ಇನ್ನೂ ಕೆಲವು ಕಂದಾಯ ಗ್ರಾಮ ಗುಡೆಕೋಟೆ ಹೋಬಳಿ, ಮಹದೇವಪುರ ಗ್ರಾಮದ ವ್ಯಾಪ್ತಿಗೆ ಸೇರಿದ ಕೆಲವೊಂದು ಸರ್ಕಾರಿ ಹಳ್ಳ ಪರಂಪೋಕ್ ಜಮೀನುಗಳಲ್ಲಿ ಸರ್ಕಾರದ ಬೋರ್ಡ್ ನ್ನು ಯಾವುದೋ ರಾಜಕೀಯ ಪ್ರೇರಿತವಾಗಿ ಬೋರ್ಡ್ ನ್ನು (ಹೂಣಿದ್ದು) ಹಾಕಿರುರುತ್ತಾರೆ.

ಆ ಜಮೀನು ಮಾಡುವಂತವರು ಬೋವಿ ಸಮುದಾಯದ ವಿಧವೆ ಯಾರು ಅಂತವರ ಮೇಲೆ ಜಮೀನು ಸಾಗುವಳಿ ಮಾಡುತ್ತಿರುವ ಕೆಲವರ ಜನರ ಜಮೀನುಗಲ್ಲಿ ಬೋರ್ಡ್ ನ್ನು ಹಾಕಿರುವುದನ್ನು ವಿರೋಧಿಸಿ,ಮಾನ್ಯ ತಹಸೀಲ್ದಾರ್ ತೆರವು ಗೊಳಿಸಬೇಕು ಇಲ್ಲವಾದರೆ ಮುಂದಿನ ದಿನಗಲ್ಲಿ ತಾಲೂಕು ಕಚೇರಿಯ ಮುಂದೆ ಸರ್ಕಾರದ ವಿರುದ್ಧ ಹಾಗೂ ಅಧಿಕಾರಿಗಳ ವಿರುದ್ಧ ಧರಣಿ ಹೋರಾಟ ಮಾಡಲಾಗುವುದು ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಭೀಮಪ್ಪ, ದೇವೇಂದ್ರಪ್ಪ, ಬಣಕಾರ್ ಬಸವರಾಜ್, ಲಕ್ಷ್ಮಿ, ಮಂಜುನಾಥ್, ಉಮೇಶ್ ನಾಯ್ಕ್, ಇನ್ನೂ ಮುಂತಾದವರು ಭಾಗವಹಿದ್ದರು.

ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ರಾಘವೇಂದ.ಬಿ.ಸಾಲುಮನೆ.ಕೂಡ್ಲಿಗಿ

ಗ್ರಾ.ಪಂ. ಸದಸ್ಯರನ್ನು ನಿರ್ಲಕ್ಷ್ಯ ತೋರಿದ ಪಿ.ಡಿ.ಓ

ಉಜ್ಜಿನಿ : ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕಿನ ಉಜ್ಜಿನಿ ಗ್ರಾಮ ಪಂಚಾಯಿತಿಯಲ್ಲಿ ದಿ. 26 ಜುಲೈ 2024 ರಂದು ಚಂದ್ರಪ್ಪ ಸದಸ್ಯರು ಅನಾರೋಗ್ಯ ದಿಂದ ಪಂಚಾಯಿತಿಯಲ್ಲಿ ಮಲಗಿ ಕೊಂಡಿದ್ದಾರೆ.

ಉಜ್ಜಿನಿ ಗ್ರಾಮ ಪಂಚಾಯತಿಯ ಬೈರದೇವರ ಗುಡ್ಡದ ಸದಸ್ಯರಾದ ಚಂದ್ರಪ್ಪ ನವರು ಪೈಪ್ಲೈನ್ ರಿಪೇರಿ ಮಾಡಿದ ಕೆಲಸಕ್ಕೆ ಹಣ ಕೊಡದೆ ಸತಾಯಿಸುತ್ತಿರುವ ಪಿಡಿಓ ಜಯಮ್ಮನವರ ವಿರುದ್ಧ ಹಣ ಕೇಳುತ್ತಾ ಸದಸ್ಯರಾದ ಚಂದ್ರಪ್ಪ ಅನಾರೋಗ್ಯ ದಿಂದ ಇದ್ದರೂ ಹಣದ ತೊಂದರೆ–ಯಾಗಿದೆ ನಾನು ಅನಾರೋಗ್ಯ ದಿಂದ ಇದ್ದರೂ ಆಸ್ಪತ್ರೆಗೆ ತೋರಿಸಲು ಹಣ ಬೇಕಾಗಿದೆ ಎಂದು ಕೇಳಿದರೂ ಸಹ ಹಣ ಕೊಡುತ್ತಿಲ್ಲವಂತೆ, ಹೀಗಾಗಿ ಚಳಿ ಜ್ವರ ಬಂದು ಚಂದ್ರಪ್ಪ ಪಂಚಾಯತಿಯಲ್ಲಿ ಮಲಗಿ ಕೊಂಡಿದ್ದಾರೆ ಇದನ್ನು ಕಂಡ ಕುರುಗೋಡು ಸಿದ್ದೇಶ್ ಅವರನ್ನು ಮಾತನಾಡಿಸಿ ಏನಪ್ಪಾ ನಿನ್ನ ಸಮಸ್ಯೆ ಎಂದು ಕೇಳಿದಾಗ ಅವರು ಹೇಳಿದ್ದು ಹೀಗೆ ನಾನು ಮಾಡಿರುವ ಕೆಲಸ ಹಣ ಪಿಡಿಓ ರವರು ನೀಡಿಲ್ಲ ನನಗೆ ಹಣ ಬೇಕಾಗಿದೆ ನನ್ನ ಅನಾರೋಗ್ಯ ದಿಂದ ಬಳಲುತ್ತಿದ್ದರು ಇವರ ಗಮನಕ್ಕೆ ಇದ್ದರೂ ನನಗೆ ಹಣ ಪಾವತಿ ಮಾಡುತ್ತಿಲ್ಲ ಎಂದು ತಿಳಿಸುತ್ತಿದ್ದಾರೆ ಎಂದು ಕುರುಗ–ೋಡು ಸಿದ್ದೇಶ್ ಚೌಡಪ್ಪ ಸದಸ್ಯರು ರವಿ ಸದಸ್ಯರು ಮತ್ತಿತರರು ತಿಳಿಸಿದರು.

ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಪ್ರದೀಪ್ ಕುಮಾರ್ ಸಿ ಕೊಟ್ಟೂರು.

ಸರ್ಕಾರಿ ಹಿರಿಯ ಹೆಣ್ಣು ಮಕ್ಕಳ ಶಾಲೆಯಲ್ಲಿ ಸಮಾಲೋಚನೆ ಸಭೆ

ಕಲಕೇರಿ : ತಾಳಿಕೋಟಿ ತಾಲೂಕಿನ ಕಲಕೇರಿ ಸರ್ಕಾರಿ ಹಿರಿಯ ಹೆಣ್ಣು ಮಕ್ಕಳು ಶಾಲೆ ಇಂದು ಸರ್ಕಾರಿ ಹಿರಿಯ ಹೆಣ್ಣು ಮಕ್ಕಳ ಶಾಲೆ ಕಲಕೆರಿಯಲ್ಲಿ 6–8 ನೇ ತರಗತಿ ಬೋಧಿಸುವ ಶಿಕ್ಷಕರ ವಿಷಯವಾರು ಚರ್ಚೆ ಕುರಿತು ಸಮಾಲೋಚನೆ ಸಭೆಯನ್ನು ಹಮ್ಮಿಕೊಳ್ಳಲಾಯಿತು, ಕಾರ್ಯಕ್ರಮದಲ್ಲಿ ಕಲಕೇರಿ ಸಮೂಹ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಸ್ ಎಲ್ ನಾಯ್ಕೋಡಿ & ಅಸ್ಕಿ ಸಮೂಹ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಆರ್ ಎಲ್ ನಾಯ್ಕೋಡಿ ಸ್ಥಳೀಯ ಶಾಲೆಯ ಮುಖ್ಯ ಗುರುಗಳಾದ ಶ್ರೀ ಎಸ್ ಬಿ ಪಡಶೆಟ್ಟಿ, ಎಮ್ ಪಿ ಎಸ್ ಶಾಲೆಯ ಮುಖ್ಯ ಗುರುಗಳಾದ ಶ್ರೀ ಜೆ ಬಿ ಕುಲಕರ್ಣಿ ಹಾಗೂ ಇಂದಿನ ತರಬೇತಿಯನ್ನು ನೀಡಲು ಬಂದಿರುವ ಶ್ರೀ ಎಂ ಆರ್ ಮುಜಾವರ್ ಶ್ರೀ ಬಿ ಎಸ್ ಆಲಾಳಮಠ, ಶ್ರೀ ಪ್ರಕಾಶ್ ದೇಸಾಯಿ , ಶ್ರೀಮತಿ ಎಸ್ ವಿ ಜುಂಜಾ, ಅಸ್ಕಿ ಹಾಗೂ ಕಲಕೇರಿ ಕ್ಲಸ್ಟರ್ ಎಲ್ಲಾ ಶಿಕ್ಷಕರು ಪಾಲ್ಗೊಂಡಿದ್ದರು. ತರಬೇತಿ ಕುರಿತು ಕಲಕೇರಿ ಕ್ಲಸ್ಟರ್ ಸಮೂಹ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಸ್ ಎಲ್ ನಾಯ್ಕೋಡಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು ನಂತರ ಎಲ್ಲಾ ಶಿಕ್ಷಕರು ತಮ್ಮ ತರಗತಿಯಲ್ಲಿರುವ ಸವಾಲುಗಳನ್ನು ಕುರಿತು ಚರ್ಚಿಸಿದರು ತದನಂತರ ಮಕ್ಕಳ ಎದುರಿಗೆ ಪ್ರಾತ್ಯಕ್ಷಿಕ ಪಾಠಗಳನ್ನು ನೀಡಲಾಯಿತು. ಎಲ್ಲಾ ಸಂಪನ್ಮೂಲ ವ್ಯಕ್ತಿಗಳು ತಮಗೆ ಬಂದ ವಿಷಯವನ್ನು ಅತ್ಯಂತ ಮನ ಮುಟ್ಟುವಂತೆ ವಿವರವಾಗಿ ತಿಳಿಸಿದರು. ಪ್ರಯೋಗಗಳ ಮೂಲಕ ವಿಷಯವನ್ನು ವಿವರಿಸಿದರು ಎಲ್ಲಾ ಶಿಕ್ಷಕರು ಗುರುಮಾತೆ ಅವರು ಪಾಲ್ಗೊಂಡಿದ್ದರು.

ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಮೈಬೂಬಬಾಷ ಮನಗೂಳಿ ತಾಳಿಕೋಟೆ.

ಡಾ॥ ಮಹಾಂತಶ್ರೀಗಳ ಜನ್ಮ ದಿನವನ್ನು ವ್ಯಸನ ಮುಕ್ತ ದಿನಾಚರಣೆ ಅಗಷ್ಟ 1 ರಂದು ಆಚರಣೆ

ಇಳಕಲ್ : ಚಿತ್ತರಗಿ ಶ್ರೀ ವಿಜಯ ಮಹಾಂತ ಮಠದ ೧೯ನೇ ಪೀಠಾಧಿಪತಿ ಈ ಭಾಗದ ನೆಡೆದಾಡುವ ದೇವರೆಂದೆ ಖ್ಯಾತರಾಗಿದ್ದ ಮಹಾಂತ ಜೋಳಿಗೆಯ ಹರಿಕಾರ ದುಷ್ಟಟಗಳ ವಿಮೋಚಕ ಡಾ॥ ದಿ ಮಹಾಂತಶ್ರೀಗಳ ೯ಳಿ ನೇ ಜನ್ಮ ದಿನವನ್ನು ತಾಲೂಕಾಡಳಿತದಿಂದ ಆಚರಿಸಲು ಸಿದ್ಧತೆ ನೆಡೆಸಲಾಗಿದೆ.ಎಂದು ತಹಶೀಲ್ದಾರ ಸತೀಶ ಕೂಡಲಗಿ ತಿಳಿಸಿದರು.

ತಹಶೀಲ್ದಾರ ಕಛೇರಿಯಲ್ಲಿ ಇಂದು ನಡೆದ ವ್ಯಸನ ಮುಕ್ತ ದಿನಾಚರಣೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು ಶ್ರೀಗುರು ಮಹಾಂತಸ್ವಾಮಿಗಳ ಹಾಗೂ ಶ್ರೀ ವಿಜಯಮಹಾಂತೇಶ ವಿಧ್ಯಾ ವರ್ಧಕ ಸಂಘದ ಪದಾಧಿಕಾರಿಗಳೊಂದಿಗೆ ಚರ್ಚಿಸಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಚರ್ಚಾ ಸ್ಪರ್ಧೆ, ಪ್ರಭಂದ ಸ್ಪರ್ಧೆ ಮತ್ತು ರಸಪ್ರಶ್ನೆಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಶಿಕ್ಷಣ ಇಲಾಖೆ ವತಿಯಿಂದ ಹಮ್ಮಿಕೊಳ್ಳಲು ತಿಳಿಸಲಾಗಿದೆ. ಪ್ರಥಮ, ದ್ವಿತೀಯ ಪ್ರಶಸ್ತಿಗಳನ್ನು ನಿಡಲಾಗುವುದು. ದುಷ್ಟಟಗಳ ಅರಿವಿನ ಜಾಗೃತಿ ಕುರಿತು ಬೀದಿ ನಾಟಕ ಜನಜಾಗೃತಿ ಪಾದಯಾತ್ರೆ ಹಮ್ಮಿಕೊಳ್ಳಲಾಗುವುದು. ಬೆಳಿಗ್ಗೆ ತಹಶೀಲ್ದಾರ ಕಛೇರಿಯಲ್ಲಿ ಡಾ॥ ಮಹಾಂತಶ್ರೀಗಳ ಭಾವಚಿತ್ರ ಅನಾವರಣಗೊಳಿಸಿ ಪೂಜೆ ಸಲ್ಲಿಸಲಾಗುವುದು.

ತಾಲೂಕಿನ ನಗರದ ವಿವಿಧ ಸಂಘ ಸಂಸ್ಥೆಗಳ ಹಾಗೂ ವಿಧ್ಯಾರ್ಥಿಗಳಿಂದ ಪ್ರಾತಪೇರಿ ನಡೆಸಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಶಾಸಕರಾದ ಸನ್ಮಾನ್ಯ ಶ್ರೀ ವಿಜಯಾನಂದ .ಎಸ್. ಕಾಶಪ್ಪನವರ ನೇತ್ರತ್ವದಲ್ಲಿ ವಿಶೇಷ ಕಾರ್ಯಕ್ರಮಗಳೊಂದಿಗೆ ಆಚರಿಸಲು ನಿರ್ಧರಿಸಲಾಗಿದೆ ಎಂದು ವಿವರಿಸಿದರು. ಉಪತಹಶೀಲಾದಾರ ಈಶ್ವರ ಗಡ್ಡಿ ಸ್ವಾಗತಿಸಿ ವಂದಿಸಿದರು.

ವೇದಿಕೆಯಲ್ಲಿ ನಗರ ಠಾಣೆ ಪಿ.ಎಸ್.ಐ ಎಸ. ಆರ್.ನಾಯಕ್ ,ಕೆ.ಇ.ಬಿ ಎಇಇ, ತೋಟಗಾರಿಕೆ–ಯ ಇಲಾಖೆ ಅಧಿಕಾರಿ ಹಾಗೂ ತಾಲೂಕಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಖಾನಾಪೂರ ತಾಲೂಕಿನ ಪ್ರವಾಹ ಪೀಡಿತ ಪ್ರದೇಶಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರ ಭೇಟಿ: ಕಾಡಂಚಿನ ಗ್ರಾಮಸ್ಥರ ಸ್ಥಳಾಂತರಕ್ಕೆ ಚಿಂತನೆ

ಖಾನಾಪೂರ : ಅತಿವೃಷ್ಟಿ/ಪ್ರವಾಹ ಸಂಭವನೀಯ ಹಿನ್ನಲೆಯಲ್ಲಿ ಲೋಕೋಪಯೋಗಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಅವರು ಶುಕ್ರವಾರ ಖಾನಾಪೂರ ತಾಲೂಕಿನ ಪ್ರವಾಹ ಪೀಡಿತ, ಮಳೆ ಹಾನಿ ಗೊಳಗಾದ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಜಾಂಬೋಟಿ ರಸ್ತೆಯ ಕುಸುಮಳ್ಳಿ ಸೇತುವೆ, ವೀಕ್ಷಿಸಿ, ಬಳಿಕ ಖಾನಾಪೂರ ದಿಂದ ಜಾಂಬೋಟಿಗೆ ಸಂಪರ್ಕ ಕಲ್ಪಿಸುವ ಮದ್ಯದಲ್ಲಿ ಮಲಪ್ರಭಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆಯ ಸ್ಥಿತಿ ಗತಿಯನ್ನು ಪರಿಶೀಲಿಸಿದರು. ನಂತರ ಖಾನಾಪೂರ ಪ್ರವಾಸಿ ಮಂದಿರದಲ್ಲಿ ವಿವಿಧ ಗ್ರಾಮಗಳ ಜನರ ಅಹವಾಲುಗಳನ್ನು ಆಲಿಸಿದರು.

ಈ ಸಂದರ್ಭದಲ್ಲಿ ಸಚಿವರನ್ನು ಭೇಟಿ ಮಾಡಿದ ಮಲಪ್ರಭಾ ನದಿ ತೀರದ ಹಿರೇಹಟ್ಟಿ ಹೊಳಿ ಗ್ರಾಮದ ಜನರು, ಸಂಪೂರ್ಣ ಗ್ರಾಮವೇ ಜಲಾವೃತ ಗೊಳ್ಳುವುದರಿಂದ ಕೂಡಲೇ ಪರ್ಯಾಯ ವ್ಯವಸ್ಥೆ ಕಲ್ಪಿಸುವಂತೆ ಮನವಿ ಮಾಡಿಕೊಂಡರು.

ಪ್ರತಿವರ್ಷ ಮಳೆಗಾಲದಲ್ಲಿ ಹಿರೇಹಟ್ಟಿ ಹೊಳಿ ಮುಳುಗಡೆ ಯಾಗುವುದರಿಂದ ವೈದ್ಯಕೀಯ ಸೌಲಭ್ಯ, ಶಿಕ್ಷಣ ಮತ್ತಿತರ ಮೂಲ ಸೌಕರ್ಯಗಳು ಗ್ರಾಮಸ್ಥರಿಗೆ ಸಿಗುತ್ತಿಲ್ಲ; ಆದ್ದರಿಂದ ಇದಕ್ಕೆ ಶಾಶ್ವತ ಪರಿಹಾರ ಒದಗಿಸ ಬೇಕು ಎಂದು ಸಚಿವರಿಗೆ ಒತ್ತಾಯಿಸಿದರು.

ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಅಧಿಕಾರಿಗಳಿಗೆ ಸೂಚನೆ ನೀಡಿದರು.

15 ಗ್ರಾಮಗಳ ಜನರ ಸ್ಥಳಾಂತರಕ್ಕೆ ಸಿದ್ಧ–ಈವೇಳೆ ಖಾನಾಪೂರ ಪ್ರವಾಸಿ ಮಂದಿರದಲ್ಲಿ ಸುದ್ದಿ ಗಾರರೊಂದಿಗೆ ಮಾತನಾಡಿದ ಸಚಿವ ಸತೀಶ್ ಜಾರಕಿಹೊಳಿ ಅವರು, ಖಾನಾಪುರ ತಾಲೂಕಿನ ಕಾಡಂಚಿನ 15 ಗ್ರಾಮಗಳನ್ನು ಪಟ್ಟಿ ಮಾಡಲಾಗಿದ್ದು, ಅವರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು. ಇಲ್ಲವೇ ಅಲ್ಲಿನ ಜನರನ್ನು ಸ್ಥಳಾಂತರಿಸುವ ಕುರಿತು ಯೋಚಿಸಲಾಗುವುದು ಎಂದರು.

ಹೊಸ ರಸ್ತೆ ನಿರ್ಮಿಸಲು ಅರಣ್ಯ ಇಲಾಖೆಯಿಂದ ಅನುಮತಿಯಿಲ್ಲ. ನೂರಾರು ವರ್ಷಗಳಿಂದ ಜನರು ಅಂತಹ ಪ್ರದೇಶದಲ್ಲಿ ವಾಸವಿದ್ದಾರೆ. ಈ ಕುರಿತು ಈಗಾಗಲೇ ಅರಣ್ಯ ಸಚಿವರು ಹಾಗೂ ಸ್ಥಳೀಯ ಶಾಸಕರೊಂದಿಗೆ ಬೆಂಗಳೂರಿನಲ್ಲಿ ಸಭೆ ನಡೆಸಲಾಗಿದೆ. ಅರಣ್ಯ ಸಚಿವರಿಗೆ ಇಲ್ಲಿನ ಸ್ಥಳೀಯ ಸ್ಥಿತಿ ಗತಿಗಳನ್ನು ವಿವರಿಸಲಾಗುವುದು ಎಂದು ಹೇಳಿದರು.

ಇತ್ತೀಚೆಗೆ ಕಾಡಂಚಿನ ಅಮಗಾಂವ ಗ್ರಾಮದ ಮಹಿಳೆ ಆರೋಗ್ಯ ಸಮಸ್ಯೆಯಿಂದ ಸಾವನ್ನಪ್ಪಿರುವ ಪ್ರಕರಣ–ಕದ ಬಗ್ಗೆ ಜಿಲ್ಲಾಧಿಕಾರಿಯಿಂದ ಮಾಹಿತಿ ಪಡೆಯಲಾಗಿದೆ. ಸರಿಯಾದ ಸಮಯಕ್ಕೆ ಆಸ್ಪತ್ರೆಗೆ ಸೇರಿಸಲು ವಾಹನ ವ್ಯವಸ್ಥೆ, ಆ?ಯಂಬುಲೆನ್ಸ್ ಹೋಗಲು ಸರಿಯಾದ ರಸ್ತೆ ಇಲ್ಲ, ನೆಟವರ್ಕ್ ಸಮಸ್ಯೆ ಇದೆ ಎಂಬುದು ತಿಳಿದು ಬಂದಿದೆ.

ಅದೇ ರೀತಿಯಲ್ಲಿ ರೇಶನ್ ಪಡೆಯಲು ಕಾಡಂಚಿನ ಗ್ರಾಮಸ್ಥರು ಪರ ದಾಡುವಂತಾಗಿದೆ. ಶೇ.80 ರಷ್ಟು ಜನರು ಒಪ್ಪಿದರೆ ಅವರನ್ನು ಬೇರೆಡೆ ಸ್ಥಳಾಂತರ ಮಾಡಬಹುದು ಎಂದು ಸಚಿವ ಸತೀಶ ಜಾರಕಿಹೊಳಿ ಸ್ಪಷ್ಟಪಡಿಸಿದರು.

ಖಾನಾಪುರದ ಹಲವು ಹಳೆಯ ಸೇತುವೆಗಳಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಭಾರಿ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ. ಇನ್ನೂ ಖಾನಾಪೂರ ದಿಂದ ಗೋವಾ ರಾಜ್ಯದ ಗಡಿಯವರೆಗೂ ರಾಷ್ಟ್ರೀಯ ಹೆದ್ದಾರಿ ರಸ್ತೆ ದುರಸ್ಥಿ ಮತ್ತು ಸೇತುವೆಗಳ ನಿರ್ಮಾಣಕ್ಕೆ ಟೆಂಡರ್ ಕರೆಯಲಾಗಿದೆ. ಮಳೆಗಾಲ ಮುಗಿದ ಬಳಿಕ ಹೊಸ ಸೇತುವೆ ನಿರ್ಮಾಣಕ್ಕೆ ಸೂಚಿಸಲಾಗುವುದು ಎಂದು ಹೇಳಿದರು.

ಜಿಲ್ಲೆಯಲ್ಲಿ ಪ್ರವಾಹ ಅಷ್ಟೊಂದು ಅಪಾಯಕಾರಿ ಮಟ್ಟದಲ್ಲಿಲ್ಲ. ಸದ್ಯದ ಪ್ರವಾಹ ಪರಿಸ್ಥಿತಿ ನಿಯಂತ್ರಣದಲ್ಲಿದೆ. ನಿನ್ನೆ ಚಿಕ್ಕೋಡಿ ಭಾಗದ ವಿವಿಧೆಡೆ ಭೇಟಿ ಪರಿಶೀಲನೆ ನಡೆಸಲಾಗಿದೆ. ಸದ್ಯಕ್ಕೆ ಯಾವುದೇ ಸಮಸ್ಯೆ ಇಲ್ಲ ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಈ ಸಂದರ್ಭದಲ್ಲಿ ಖಾನಾಪುರ ಶಾಸಕರಾದ ವಿಠ್ಠಲ ಹಲಗೇಕರ, ಮಾಜಿ ಶಾಸಕರಾದ ಅಂಜಲಿ ನಿಂಬಾಳ್ಕರ್, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎಂ.ಎಂ. ಶರ್ಮಾ ಬೆಳಗಾವಿ.

ತಾಲೂಕಾ ಆಡಳಿತದಿಂದ ನೂತನ ಮೈದಾನದಲ್ಲಿ ಈ ಬಾರಿ ಸ್ವಾತಂತ್ರೋತ್ಸವ

ಇಳಕಲ್ : ಈ ಬಾರಿಯ ಅಗಷ್ಟ ೧೫ರ ಸ್ವಾತಂತ್ರೋತ್ಸವವನ್ನು ತಾಲೂಕಾಡಳಿತದಿಂದ ವಿಶೇಷವಾಗಿ ತಹಶೀಲ್ದಾರ ಕಛೇರಿಯ ನೂತನ ಮೈದಾನದಲ್ಲಿ ಆಚರಿಸಲು ಸಿದ್ಧತೆ ನೆಡೆಸಲಾಗಿದೆ. ಎಂದು ತಹಶೀಲ್ದಾರ ಸತೀಶ ಕೂಡಲಗಿ ತಿಳಿಸಿದರು.

ತಹಶೀಲ್ದಾರ ಕಛೇರಿಯಲ್ಲಿ ಇಂದು ನಡೆದ ಸ್ವಾತಂತ್ರ ದಿನಾಚರಣೆಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು ಪೊಲೀಸ ಇಲಾಖೆ ಗೃಹರಕ್ಷಕದಳ ಎನ್. ಸಿ. ಸಿ ಎನ್. ಎಸ್. ಎಸ್ ಸೇವಾರ್ಥಿಗಳಿಂದ ವಿಶೇಷ

ಪ್ಲಾಸ್ಟಿಕ್ ಸರ್ಜರಿ ಸದುಪಯೋಗ ಪಡೆದುಕೊಳ್ಳಿ

ವಿಜಯಪುರ : ನಗರದ ಪ್ರತಿಷ್ಠಿತ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಶಸ್ತ್ರಚಿಕಿತ್ಸೆ ವಿಭಾಗ ಮತ್ತು ಭಾರತೀಯ ಶಸ್ತ್ರ ಚಿಕಿತ್ಸಕರ ಸಂಘದ ವಿಜಯಪುರ ಜಿಲ್ಲಾ ಶಾಖೆಯ ಸಹಯೋಗದಲ್ಲಿ ನಗರದಲ್ಲಿ ವಿಶ್ವ ಪ್ಲಾಸ್ಟಿಕ್ ಸರ್ಜರಿ ದಿನಾಚರಣೆಯ ಕಾರ್ಯಕ್ರಮ ನಡೆಯಿತು.

ಸೋಮವಾರ ಈ ಕಾರ್ಯಕ್ರಮದ ಅಂಗವಾಗಿ ನಡೆದ ಮುಂದುವರೆದ ವೈದ್ಯಕೀಯ ಶಿಕ್ಷಣ ಸಮ್ಮೇಳನವನ್ನು ವಿವಿ ಕುಲಪತಿ ಡಾ. ಆರ್. ಎಸ್. ಮುಧೋಳ ಉದ್ಘಾಟಿಸಿದರು.

ಈ ಸಮಾರಂಭದಲ್ಲಿ ಖ್ಯಾತ ಪ್ಲಾಸ್ಟಿಕ್ ಸರ್ಜನ್ ಡಾ. ಪ್ರದೀಪ ಜೈನ್ ಗಾಯ ನಿರ್ವಹಣೆ ಕುರಿತು ಉಪನ್ಯಾಸ ನೀಡಿ–ದರು. ಡಾ. ವಿಜಯಕುಮಾರ ಹುಡೇದ ಪ್ಲಾಸ್ಟಿಕ್ ಸರ್ಜರಿಯ ಸತ್ಯ ಮತ್ತು ಮಿತ್ಯಗಳ ಕುರಿತು ಮಾತನಾಡಿದರು.ಪ್ಲಾಸ್ಟಿಕ್‌ಸರ್ಜ–ರಿಯು ತುಂಬಾ ವಿಶಾಲವಾದುದು ಮತ್ತು ಇದರ ಉಪಯೋಗ ಜನರು ಪಡೆದುಕೊಳ್ಳಬೇಕು ಎಂದು ಹೇಳಿದರು.

ನರಶಸ್ತ್ರಚಿಕಿತ್ಸಕ ಡಾ. ಬಸವರಾಜ ಬಡದಾಳ ಅವರು ಪ್ಲಾಸ್ಟಿಕ್ ಸರ್ಜರಿ ಮತ್ತು ನ್ಯೂರೋ ಸರ್ಜರಿಯ ಕುರಿತು ಉಪನ್ಯಾಸ ನೀಡಿದರು. ಡಾ. ಅನಿಕೇತನ್ ಅವರು ಪ್ಲಾಸ್ಟಿಕ್ ಸರ್ಜರಿ ಮತ್ತು ಮುಖದ ಪ್ಲಾಪ ಸರ್ಜರಿಯ ಕುರಿತು ಮಾತನಾಡಿದರು. ಡಾ. ಶ್ರೀಪಾದ ಕುಲಕರ್ಣಿ ಅವರು ಆರ್ಥೋಪ್ಲಾಸಿಟ್ಕ್ ಕೇರ್ ಕುರಿತು ಉಪನ್ಯಾಸ ನೀಡಿದರು. ಡಾ. ಸನ್ಮಿತ್ರ ಐಹೊಳ್ಳಿ ಸೌಂದರ್ಯ ವರ್ಧಕ ಶಸ್ತ್ರಚಿಕಿತ್ಸೆ ಕುರಿತು ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ವಿಜಯಪುರದ ಖ್ಯಾತ ಶಸ್ತ್ರಚಿಕಿತ್ಸಕ ಡಾ. ರವಿಕುಮಾರ ಚೌಧರಿ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯ ಸಮಕುಲಾಧಿಪತಿ ಪೊ?ರ. ವೈ. ಎಂ. ಜಯರಾಜ, ಸಮಕುಲಪತಿ ಡಾ. ಅರುಣ ಚಂ. ಇನಾಮದಾರ, ಪ್ರಾಚಾರ್ಯ ಡಾ. ಅರವಿಂದ ಪಾಟೀಲ, ವಿಜಯಪುರ ಜಿಲ್ಲಾ ಶಸ್ತ ಚಿಕಿತ್ಸಕರ ಸಂಘದ ಕಾರ್ಯದರ್ಶಿ ಡಾ. ರಮಾಕಾಂತ ಬಳೂರಕರ ಇದ್ದರು.

ಈ ಸಮ್ಮೇಳನದಲ್ಲಿ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಡೀನ್ ಫ್ಯಾಕಲ್ಟಿ ಆಫ್ ಮೆಡಿಸಿನ್ ಡಾ. ತೇಜಸ್ವಿನಿ ವಲ್ಲಭ, ಉಪಪ್ರಾಂಶುಪಾಲ ಡಾ. ಎಂ. ಬಿ. ಪಾಟೀಲ, ಜಿಲ್ಲಾ ಆಸ್ಪತ್ರೆಯ ಡಾ. ಆನಂದ ಝಳಕಿ, ಡಾ. ನಿಶಿಕಾಂತ ಗುಜರ, ಡಾ. ಸಂತೋಷ ನಂದಿ, ಸಹ ಪ್ರಾಧ್ಯಾಪಕ ಡಾ. ಗಿರೀಶ ಕುಲ್ಲೊಳ್ಳಿ, ಡಾ. ವಿಕ್ರಂ ಸಿಂದಗಿಕರ, ಡಾ. ದೀಪಕ ಚವ್ಹಾಣ, ಡಾ. ದಯಾನಂದ ಬಿರಾದಾರ, ಡಾ. ಸಂಜೀವ ರಾಠೋಡ, ಡಾ. ಮಂಜುನಾಥ ಸಾವಂತ ಮತ್ತು ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ, ಅಲ್ ಅಮೀನ್ ವೈದ್ಯಕೀಯ ಮಹಾವಿದ್ಯಾಲಯ, ಜಿಲ್ಲಾ ಆಸ್ಪತ್ರೆಯ ಶಸ್ತ ಚಿಕಿತ್ಸೆ ವಿಭಾಗದ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಗಂಗಾವತಿ: ಫಿಜಿಯೋಥೆರಪಿಸ್ಟ್, ಆಯಾ ಹುದ್ದೆಗೆ ಅರ್ಜಿ ಆಹ್ವಾನ

ಕೊಪ್ಪಳ : ಗಂಗಾವತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸಮನ್ವಯಾಧಿಕಾರಿಗಳ ಕಾಯಾರ್ಲಯದಿಂದ 2024–25ನೇ ಸಾಲಿನಲ್ಲಿ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆ ಹಾಗೂ ಸಮನ್ವಯ ಶಿಕ್ಷಣ ಶೀರ್ಷಿಕೆಯಡಿ ವಿಶೇಷ ಚೇತನ ಮಕ್ಕಳಿಗೆ ಫಿಜಿಯೋಥೆರಪಿ ಚಿಕಿತ್ಸೆ ನೀಡಲು ಫಿಜಿಯೋಥೆರಪಿಸ್ಟ್ ಹುದ್ದೆಗೆ ಹಾಗೂ ಶಾಲಾ ಸಿದ್ಧತೆ ಕೇಂದ್ರದಲ್ಲಿ ಕಾರ್ಯನಿರ್ವಹಿಸಲು ಆಯಾ ಹುದ್ದೆಗೆ ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಫಿಜಿಯೋಥೆರಪಿಸ್ಟ್‌ಮತ್ತುಆಯಾ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಜುಲೈ 26ರ ಒಳಗಾಗಿ ಕ್ಷೇತ್ರ ಸಮನ್ವಯಾಧಿಕಾರಿಗಳ ಕಾಯಾರ್ಲಯ ಸಂಗಾಪುರದಲ್ಲಿ ಅರ್ಜಿ ಸಲ್ಲಿಸಬಹುದು ಎಂದು ಗಂಗಾವತಿ ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸಮನ್ವಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಂಡರಾಪುರ ವಿಷ್ಣುವಿನ ಆರಾಧನಾ ಕೇಂದ್ರವಾಗಿದೆ: ವೇ.ಜೋಶಿ

ತಾಳಿಕೋಟೆ : ಆಷಾಡ ಏಕಾದಶಿಯನ್ನು ಮಹಾ ಏಕಾದಶಿ ಶಯನಿ ಏಕಾದಶಿ ಎಂದು ಕರೆಯಲಾಗುತ್ತದೆ ಆಷಾಡ ಶುಕ್ಲಪಕ್ಷದ 11ನೇ ದಿನ ಏಕಾದಶಿ ಬರುತ್ತಿದ್ದು ಈ ಏಕಾದಶಿಯು ವಿಷ್ಣುವಿನ ಭಕ್ತರಿಗೆ ಮಹತ್ವದ್ದಾಗಿದೆ ಈ ದಿನದಂದು ವಿಷ್ಣು ಮತ್ತು ಲಕ್ಷ್ಮೀ ದೇವಿಯನ್ನು ಪೂಜಿಸಲಾಗುತ್ತದೆ ಎಂದು ಸ್ಥಳೀಯ ಜ್ಯೋತಿಷ್ಯ ಶಾಸ್ತ್ರ ಪರಿಣಿತರಾದ ವೇ.ವಸಂತ ಜೋಶಿ ಅವರು ನುಡಿದರು.

ಬುಧವಾರರಂದು ಸ್ಥಳೀಯ ಶ್ರೀ ವಿಠ್ಠಲ ರುಕುಮಾಯಿ ಮಂದಿರದಲ್ಲಿ ಶ್ರೀ ಪಾಂಡುರಂಗ ವಿಠ್ಠಲ ಟ್ರಸ್ಟ ಕಮಿಟಿಯವರ ವತಿಯಿಂದ ಏರ್ಪಡಿಸಲಾದ ಆಷಾಡ ಏಕಾದಶಿ ಮಹಾ ಪೂಜಾ ಕಾರ್ಯಕ್ರಮದಲ್ಲಿ ಭಜನಾ ಮಂಡಳಿಯವರೊಂದಿಗೆ ಪಾಲ್ಗೊಂಡು ಪಾಂಡುರಂಗ ವಿಠ್ಠಲ ಅವರ ಭಕ್ತಿಯ ಹಾಡುಗಳನ್ನು ಹಾಡಿ ಮಾತನಾಡಿದ ಅವರು ಆಷಾಡ ಏಕಾದಶಿಯ ದಿನದಂದು ಶ್ರೀ ವಿಠ್ಠಲ ರುಕುಮಾಯಿಗೆ ಭಕ್ತಾಧಿಗಳು ಮಹಾ ಪೂಜೆ ಸಲ್ಲಿಸಿ ಉಪವಾಸ ವೃತ ಆಚರಣೆ ಮಾಡುತ್ತಾರೆ ಮುಂದಿನ 4 ತಿಂಗಳು ಚಾತುರ್ಮಾಸದಲ್ಲಿ ಆಚರಿಸಬೇಕಾದ ವೃತಗಳನ್ನು ಇಟ್ಟುಕೊಂಡು ತಮ್ಮ ಬೇಕು ಬೇಡಿಕೆಗಳನ್ನು ಇಡೇರಿಸಿಕೊಳ್ಳುತ್ತಾರೆಂದ ಅವರು ಯಾವುದಾರೂ ಆಹಾರ ತೆಜಿಸುವ ಬಗ್ಗೆ ಹಾಗೂ ಪ್ರತಿ ಏಕಾದಶಿ ಆಚರಣೆಯ ನಿರ್ಧಾರ ಕೈಗೊಳ್ಳುತ್ತಾರೆಂದರು.

ಇನ್ನೋರ್ವ ವೇ.ಶ್ರೀಧರ ಗ್ರಾಂ ಪೊರೊಹಿತ ಅವರು ಮಾತನಾಡಿ ಈ ಆಷಾಡ ಏಕಾದಶಿ ದಿನದಂದು ಪಂಡರಪುರಕ್ಕೆ ಹೆಚ್ಚಿನ ಭಕ್ತರು ಬೆಟ್ಟಿ ನೀಡಿ ಶ್ರೀ ವಿಠ್ಠಲ ರುಕುಮಾಯಿ ದೇವರ ದರ್ಶನ ಪಡೆದುಕೊಳ್ಳುತ್ತಾರೆ ಅವರ ಅನುಕೂಲಕ್ಕೆ ವಿಶೇಷವಾಗಿ ಭಾರತೀಯ ರೈಲ್ವೆ ಇಲಾಖೆ ರೈಲನ್ನು ಓಡಿಸುತ್ತದೆ ಈ ಸಂದರ್ಭದಲ್ಲಿ ಭಕ್ತರು ಪಂಡರಾಪುರಕ್ಕೆ ಹೋಗಲು ಯಾತ್ರೆ ಕೈಗೊಳ್ಳುತ್ತಾರೆ ಕಾರಣ ಪಂಡರಾಪುರವು ವಿಷ್ಣುವಿನ ಆರಾಧನಾ ಕೇಂದ್ರವಾಗಿದೆ ಎಂದರು.

ಇನ್ನೋರ್ವ ಸ್ಥಳೀಯ ಶ್ರೀ ಪಾಂಡು ರಂಗ ವಿಠ್ಠಲ ಟ್ರಸ್ಟ ಅಧ್ಯಕ್ಷರಾದ ಸಂಭಾಜಿ ವಾಡಕರ ಅವರು ಮಾತನಾಡಿ ಪ್ರತಿವರ್ಷದಂತೆ ಶ್ರೀ ವಿಠ್ಠಲ ರುಕುಮಾಯಿ ಮಂದಿರದಲ್ಲಿ ಈ ಹಿಂದಿನಿಂದಲೂ ಆಷಾಡ ಏಕಾದಶಿಯನ್ನು ಆಚರಿಸಿಕೊಂಡು ಬರಲಾಗುತ್ತಿದೆ ಮಹತ್ವದ ಸ್ಥಾನಮಾನ ಹೊಂದಿದ ಈ ಮಂದಿರ ಜೀರ್ಣೋದ್ಧಾರ ಕಾರ್ಯ ಈ ಹಿಂದಿನ ಟ್ರಸ್ಟ ಅಧ್ಯಕ್ಷರಾದ ದಿ.ವಿಠ್ಠಲಸಿಂಗ್ ಹಜೇರಿ ಅವರ ನೇತೃತ್ವದಲ್ಲಿ ಪೂರ್ಣಗೊಂಡಿದೆ ಅವರು ವಿಠ್ಠಲ ರುಕುಮಾಯಿ ಅವರ ಮೇಲಿಟ್ಟ ಶ್ರದ್ಧಾ ಭಕ್ತಿಯೇ ತಾಳಿಕೋಟೆಯಲ್ಲಿಯ ಶ್ರೀ ವಿಠ್ಠಲ ಮಂದಿರವು ಉನ್ನತ ಸ್ಥಾನಮಾನಕ್ಕೇರಿದಂತಾಗಿದೆ ಎಂದರು.

ಈ ಮಹಾ ಪೂಜೆ ಹಾಗೂ ಭಜನಾ ಕಾರ್ಯಕ್ರಮದಲ್ಲಿ ಶ್ರೀ ಪಾಂಡುರಂಗ ವಿಠ?ಠಲ ಟ್ರಸ್ಟಿನ ಉಪಾಧ್ಯಕ್ಷರಾದ ನಾಗನಾಥ ದೇಶಪಾಂಡೆ, ಕಾರ್ಯದರ್ಶಿ ಅಮರಸಿಂಗ್ ಹಜೇರಿ(ಬಾಬು), ಖಜಾಂಚಿ ವಾಸುದೇವ ಹೆಬಸೂರ, ಶಾಮ ಹಂಚಾಟೆ, ಮದುಕರ ಉಭಾಳೆ ಉಪಸ್ಥಿತರಿದ್ದರು.

ವೇ.ಪ್ರತಿಕಬಟ್ ಆಚಾರ್ಯರು ಮಹಾ ಪೂಜಾ ಕಾರ್ಯಕ್ರಮವನ್ನು ನೇರವೇರಿಸಿದರು.

ಭಜನಾ ಕಾರ್ಯಕ್ರಮದಲ್ಲಿ ಆನಂದ ಕುಲಕರ್ಣಿ, ಸಚೀನ ಗ್ರಾಂಪೊರೊಹಿತ, ಅನ್ನಪೂರ್ಣಾ ಭಜನಾ ಮಂಡಳಿ, ಗಾಯಿತ್ರಿ ಭಜನಾ ಮಂಡಳಿ ಹಾಗೂ ಶ್ರೀ ಲಕ್ಷ್ಮೀದೇವಿ ಭಜನಾ ಮಂಡಳಿ ಅವರು ಪಾಲ್ಗೊಂಡು ವಿವಿಧ ಶ್ರದ್ಧಾಭಕ್ತಿಯ ಹಾಡುಗಳನ್ನು ಹಾಡಿ ಭಕ್ತಿ ಸಮರ್ಪಿಸಿದರು.

ವಿಜಯನಗರ ಕಾಲುವೆಗಳಿಗೆ ತುಂಗಭದ್ರಾ ನೀರು ಹರಿಸುವಿಕೆಗೆ ಸಂಸದರಾದ ರಾಜಶೇಖರ ಹಿಟ್ನಾಳ ಅವರಿಂದ ಚಾಲನೆ

ಕೊಪ್ಪಳ : ವಿಜಯನಗರ ಕಾಲುವೆಗಳಿಗೆ ಜುಲೈ 19ರಿಂದ ತುಂಗಭದ್ರಾ ನೀರು ಹರಿಸುವುದಕ್ಕೆ ಸಂಸದರಾದ ಕೆ.ರಾಜಶೇಖರ ಹಿಟ್ನಾಳ ಅವರು ಜು.19ರಂದು ಸ್ಟಾಟರ್ ಬಟನ್ ಒತ್ತುವುದರ ಮೂಲಕ ಚಾಲನೆ ನೀಡಿದರು.

ನೀರು ಬಿಡುಗಡೆ ಹಿನ್ನೆಲೆಯಲ್ಲಿ ತುಂಗಭದ್ರಾ ಜಲಾಶಯದ ಆಣೆಕಟ್ಟಿನ ಮೇಲಿನ ಎಡದಂಡೆ ಮುಖ್ಯ ಕಾಲುವೆಯ 9 & 10 ನೀರಾವರಿ ಗೇಟಿನ ಸ್ಟಾಟರ್ ಬಳಿಯಲ್ಲಿ ಬೆಳಗ್ಗೆ ಹಬ್ಬದ ಸಂಭ್ರಮ ಕಂಡುಬಂದಿತು. ತಳಿರು ತೋರಣಗಳಿಂದ ಯಂತ್ರವನ್ನು ಶೃಂಗರಿಸಲಾಗಿತ್ತು.

ಪಕ್ಷದ ಮುಖಂಡರು, ಮುನಿರಾಬಾದ್ ಗ್ರಾಮದ ಗ್ರಾಮ ಪಂಚಾಯತ್ ಸದಸ್ಯರು, ಭಾರಿ ನೀರಾವರಿ ನಿಗಮ ನಿಯಮಿತದ ಅಧಿಕಾರಿಗಳ ಸಮ್ಮುಖದಲ್ಲಿ ಸಂಸದರು, ಡ್ಯಾಮ್ ನೀರು ಬಿಡುಗಡೆಗೆ ವಿದ್ಯುಕ್ತ ಚಾಲನೆ ನೀಡುತ್ತಿದ್ದಂತೆ 'ತುಂಗಭದ್ರಾ ತಾಯಿಗೆ ಜಯವಾಗಲಿ' ಎನ್ನುವ ಘೋಷಣೆಗಳು ಮೊಳಗಿದವು.

ಉತ್ತಮ ಮಳೆಯಿಂದಾಗಿ ದಿನೇದಿನೆ ತುಂಬುತ್ತಿರುವ ತುಂಗಭದ್ರಾ ನೀರು ಕಾಲುವೆಗೆ ಹರಿಯುತ್ತಿದ್ದಂತೆ ಸೇರಿದ್ದ ರೈತರು ಮತ್ತು ವಿವಿಧ ಗ್ರಾಮಸ್ಥರ ಮೊಗದಲ್ಲಿ ಸಂತಷ ಕಂಡುಬಂದಿತು. ನೆರೆದಿದ್ದ ಕೆಲವು ರೈತರು, ಗ್ರಾಮಸ್ಥರು ಕಾಲುವೆಗೆ ಹರಿಯುತ್ತಿದ್ದ ನೀರಿನ ಭೋರ್ಗರೆತದ

ದೃಶ್ಯಗಳನ್ನು ಮೊಬೈಲನಲ್ಲಿ ಸೆರೆಹಿಡಿದುಕೊಂಡರು.

ಇದೇ ವೇಳೆ ಸಂಸದರು ಸುದ್ದಿಗಾರರೊಂದಿಗೆ ಮಾತನಾಡಿ, ಮುಂಗಾರು–ಹಂಗಾಮಿನಲ್ಲಿ ಮಳೆ ತೀವ್ರತೆ ಹೆಚ್ಚಾಗಿರುವುದರಿಂದ ಜಲಾನಯನ ಪ್ರದೇಶದಲ್ಲಿ ಒಳಹರಿವು ಹೆಚ್ಚಾಗುತ್ತಿದ್ದು, ಐದಾರು ದಿನಗಳಲ್ಲಿ ಡ್ಯಾಂ ತುಂಬುವ ಸಾಧ್ಯತೆಯಿದೆ. ಭಗವಂತನ ಕೃಪೆಯಿಂದ ಇದೇ ರೀತಿ ಮುಂದುವರಿದರೆ ರೈತರ ಎರಡೂ ಬೆಳೆಗಳಿಗೆ ನೀರು ಸಿಗಲಿದ್ದು, ಇದೊಂದು ಸಂತಸದ ಸಂಗತಿಯಾಗಿದೆ. ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆ ಹಾಗೂ ವಿವಿಧ ಕಾಲುವೆಗಳಿಗೆಜುಲೈ19ರಿಂದನೀರುಬಿಡಲಾಗಿದೆ.ಉಳಿದಂತೆ ಇತರ ಕಾಲುವೆಗಳಿಗೆ ನಿಗದಿತ ವೇಳಾಪಟ್ಟಿಯಂತೆ ನೀರು ಬಿಡಲಾಗುತ್ತಿದೆ. ಪಾಪಯ್ಯ ಟನಲ್ ಮೂಲಕ ರಾಯಚೂರಿಗೆ ನೀರು ಹೋಗುವ ಕಾಲುವೆ ಗಾತ್ರ ಹೆಚ್ಚಿಸುವ ಕುರಿತಂತೆ ಐಸಿಸಿ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು ಎಂದು ಹೇಳಿದರು.

ಈಸಂದರ್ಭದಲ್ಲಿಮುನಿರಾಬಾದತುಂಗಭದ್ರಯೋಜನೆಯ ಅಚ್ಚುಕಟ್ಟುಪ್ರದೇಶಾಭಿವೃದ್ಧಿಪ್ರಾಧಿಕಾರಿದ(ಕಾಡಾ)ಅಧ್ಯಕ್ಷರಾದ ಹಸನ್ ಸಾಬ್ ನಬೀಬ್ ಸಾಬ್ ದೋಟಿಹಾಳ, ಕೊಪ್ಪಳ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ, ಮುಖಂಡರಾದ ಜನಾರ್ಧನ ಹುಲಗಿ, ಮುನಿರಾಬಾದ್ ತುಂಗಭದ್ರಾ ಯೋಜನಾ ವೃತ್ತದ ಅಧೀಕ್ಷಕ ಅಭಿಯಂತರರು ಹಾಗೂ ತುಂಗಭದ್ರಾ ಯೋಜನೆ ಮತ್ತು ವಿಜಯನಗರ ಕಾಲುವೆಗಳ ನೀರಾವರಿ ಸಲಹಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಬಾರಿ ನೀರಾವರಿ ನಿಗಮ ನಿಯಮಿತದ ಅಧೀಕ್ಷಕ ಅಭಿಯಂತರರಾದ ಎಲ್ ಬಸವರಾಜ್, ತಾಂತ್ರಿಕ ಸಹಾಯಕರಾದ ಬಸಪ್ಪ ಜಾನಕರ, ವಡ್ಡರಹಟ್ಟಿಯ ಅಭಿಯಂತರರಾದ ಎಂ.ಎಸ್.ಗೋಡೇಕರ, ಮುನಿರಾಬಾದ್ ಅಭಿಯಂತರ ಗಿರೀಶ್, ಅಗಳಕೇರಾ ಅಭಿಯಂತರರಾದ ಅಮರೇಶ ಸೇರಿದಂತೆ ಇನ್ನೀತರ ಅಧಿಕಾರಿಗಳು, ಹಲವು ಗಣ್ಯರು, ಜನಪ್ರತಿನಿಧಿಗಳು, ರೈತ ಮುಖಂಡರು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ಜ್ಞಾನದ ಮಾರ್ಗದಲ್ಲಿ ನಡೆದವರು ಯಶಸ್ಸಿನ ಮೆಟ್ಟಿಲು ಏರಬಲ್ಲರು: ಪಿ.ಐ.ಭಂಡಾರಿ

ಅಥಣಿ:ಸಮಯಕ್ಕೆಬೆಲೆಕೊಡುವವರು ಸಾಧಕರಾಗಿ ಬೆಳೆಯಲು ಸಾಧ್ಯ. ವಿದ್ಯಾರ್ಥಿಗಳು ಪಠ್ಯಪುಸ್ತಕದ ವಿದ್ಯಾಭ್ಯಾಸದ ಜೊತೆಗೆ ಕ್ರೀಡೆ ಮತ್ತು ಸಾಂಸ್ಕೃತಿಕಕಾರ್ಯಕ್ರಮಗಳಲ್ಲಿಯೂ ಕೂಡ ತಮ್ಮನ ತೊಡಗಿಸಿ ಕೊಂಡಾಗ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾಗಲಿದೆ ಎಂದು ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಪಿಯು ವಿಭಾಗದ ಉಪನಿರ್ದೇಶಕ ಪಿ ಐ ಭಂಡಾರಿ ಹೇಳಿದರು.

ಅವರು ಅಥಣಿ ಪಟ್ಟಣದ ಜಾದವಜಿ ಶಿಕ್ಷಣ ಸಂಸ್ಥೆಯ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಳ್ಳಲಾಗಿದ್ದ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ವಿದ್ಯಾರ್ಥಿಗಳು ನಿರ್ದಿಷ್ಟವಾದ ಗುರಿಯನ್ನು ಇಟ್ಟುಕೊಂಡು, ಅದರ ಸಾಧನೆಗಾಗಿ ಸತತ ಪ್ರಯತ್ನ ಮಾಡಬೇಕು. ಸಮಯವನ್ನು ಹೊಂದಾಣಿಕೆ ಮಾಡಿಕೊಂಡು ಎಲ್ಲ ವಿಷಯಗಳ ಜ್ಞಾನವನ್ನು ಸಂಪಾದಿಸಬೇಕು. ಜ್ಞಾನದ ಮಾರ್ಗದಲ್ಲಿ ನಡೆದವರು ಯಶಸ್ಸಿನ ಮೆಟ್ಟಿಲನ್ನು ಏರಲು ಸಾಧ್ಯವಿದೆ ಎಂದು ಹೇಳಿದ ಅವರು ವಿದ್ಯಾರ್ಥಿಗಳು ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪಠ್ಯಪುಸ್ತಕದ ವಿಷಯಗಳ ಜೊತೆಗೆ ಇನ್ನಿತರ ಸಾಮಾನ್ಯ ಜ್ಞಾನವನ್ನು ಅಧ್ಯಯನ ಮಾಡುವುದು ಅಗತ್ಯ.ಶಾರೀರಿಕವಾಗಿಮತ್ತುಮಾನಸಿಕವಾಗಿಸದೃಢತೆ ಹೊಂದಲು ಮತ್ತು ತಮ್ಮ ಪ್ರತಿಭೆಯನ್ನ ಪ್ರದರ್ಶಿಸಲು ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ವೇದಿಕೆ ಒಳ್ಳೆಯ ಅವಕಾಶವಾಗಿದ್ದು, ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಕರೆ ನೀಡಿ–ದರು.

ದಿವ್ಯ ಸಾನಿಧ್ಯ ವಹಿಸಿದ್ದ ಬೆಳಗಾವಿ ರಾಮಕೃಷ್ಣ ಆಶ್ರಮದ ಮೋಕ್ಷಾತ್ಮಾನಂದಜಿ ಅವರು ಮಾತನಾಡಿ ವಿದ್ಯಾರ್ಥಿಗಳ ಜೀವನದಲ್ಲಿ ಗುರಿ ಮುಖ್ಯ, ಗುರಿ ಸಾಧನೆಗೆ ಆಸಕ್ತಿ ಇರಬೇಕು ಸಮಯ ಅರಿತಿರಬೇಕು, ಸುಸಂಸ್ಕೃತರಾಗಬೇಕಾದರೆ ಮೊಬೈಲ್ ಗಿಳಿನಿಂದ ದೂರವಿರಬೇಕು, ಇಂದು ವಿದ್ಯಾರ್ಥಿಗಳ ಬೆಳವಣಿಗೆಗೆ ಅಡ್ಡಿಯಾಗುವಂತದ್ದು ಮೊಬೈಲ್. ಬ್ರಹ್ಮಚರ್ಯ ಪಾಲನೆಸಾಧನವಿದ್ಯಾರ್ಥಿಗಳಬದುಕಿನಮಾರ್ಗವನ್ನು ಉನ್ನತಕ್ಕೆ ಏರಿಸುತ್ತದೆ. ವಿದ್ಯಾರ್ಥಿ ಜೀವನದಲ್ಲಿ ದೈಹಿಕ ಆಕರ್ಷಣೆಯಿಂದ ದೂರ ಇರಬೇಕು ಎಂದು ಅರ್ಥಪೂರ್ಣ ಹಿತೋಪದೇಶ ನೀಡಿದರು.

ಜಾಧವಜಿ ಶಿಕ್ಷಣ ಸಂಸ್ಥೆಯ ಕಾರ್ಯಧ್ಯಕ್ಷ ಡಾ ರಾಮ ಕುಲಕರ್ಣಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಈಸಂದರ್ಭದಲ್ಲಿಉಜ್ವಲ್ ಸಿಂಗ್ ಪವಾರ ದೇಸಾಯಿ, ಎಸ್ ಎಸ್ ಸಂಗೋರಾಮ, ಅನಿಲ ದೇಶಪಾಂಡೆ ಉಪಸ್ಥಿತರಿದ್ದರು. ಕಾಲೇಜಿನ ಪ್ರಾಚಾರ್ಯ ಎಂ. ಪಿ ಮೇತ್ರಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕು. ಮನೋಹರಿ ಪಾಟೀಲ ನಿರೂಪಿಸಿದರು. ಬಿ ಎಸ್ ಲೋಕೂರ ವಂದಿಸಿದರು.

ಕೊಪ್ಪಳ: ಕೃಷಿ ಪಂಡಿತ ಪ್ರಶಸ್ತಿಗೆ ಅರ್ಜಿ ಆಹ್ವಾನ

ಕೊಪ್ಪಳ:ಕೊಪ್ಪಳ ತಾಲ್ಲೂಕಿನ ಕೃಷಿ ಇಲಾಖೆಯಿಂದ 2024–25ನೇ ಸಾಲಿನ ಕೃಷಿ ಪಂಡಿತ ಪ್ರಶಸ್ತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಈ ಕೃಷಿ ಪಂಡಿತ ಪ್ರಶಸ್ತಿ ಸ್ಪದ–ರ್ಧೆಗೆ ಆಸಕ್ತ ರೈತ ಮತ್ತು ರೈತ ಮಹಿಳೆಯರು ಪ್ರತ್ಯೇಕ ಅರ್ಜಿ ಸಲ್ಲಿಸಬಹುದಾಗಿದೆ.

ಕೃಷಿ ಇಲಾಖೆಯ K-Kisan Portal Citizan Login ನಲ್ಲಿ ಸ್ವತಃ ರೈತರೇ ಅರ್ಜಿಯನ್ನು ಸಲ್ಲಿಸಬಹುದು. ಅಥವಾ ಹತ್ತಿರದ ರೈತ ಸಂಪರ್ಕ ಕೇಂದ್ರಕ

ಪತ್ರಿಕಾರಂಗ ನೈಜ ವರದಿಗಳನ್ನು ಪ್ರಕಟಿಸುವ ಮೂಲಕ ತನ್ನ ಪಾವಿತ್ರ್ಯತೆ ಕಾಪಾಡಿಕೊಳ್ಳಬೇಕು: ಶಾಸಕ ಲಕ್ಷ್ಮಣ ಸವದಿ

ಅಥಣಿ : ಪತ್ರಿಕೆಗಳು ಮತ್ತು ಪತ್ರಕರ್ತರು ನಿರ್ಭೀತಿಯಿಂದ ಸುದ್ದಿಗಳನ್ನು ಪ್ರಕಟಿಸುವ ಮೂಲಕ ಸಮಾಜವನ್ನು ತಿದ್ದುವ ಕೆಲಸವನ್ನ ಮಾಡಬೇಕು. ಪಾರದರ್ಶಕತೆ ಹಾಗೂ ನಿಷ್ಪಕ್ಷಪಾತದಿಂದ ವರದಿಗಳನ್ನು ನೀಡಬೇಕು ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಅವರು ಶನಿವಾರ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ. ಅಥಣಿ ತಾಲೂಕ ಘಟಕದಿಂದ ಆಯೋಜಿಸಲಾಗಿದ್ದ ತಾಲೂಕ ಮಟ್ಟದಪತ್ರಿಕಾದಿನಾಚರಣೆ,ಸಾಧಕರಸನ್ಮಾನ ಹಾಗೂಪ್ರತಿಭಾಪುರಸ್ಕಾರಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾಯಾರ್ಂಗ ಶಾಸಕಾಂಗ ಮತ್ತು ನ್ಯಾಯಾಂಗ ಜೊತೆಗೆ ನಾಲ್ಕನೆಯ ಅಂಗವಾಗಿ ಪತ್ರಿಕಾ ರಂಗವು ಪ್ರಮುಖಪಾತ್ರವಹಿಸುತ್ತದೆ.ಪತ್ರಿಕೆಗಳುಮತ್ತು ಪತ್ರಕರ್ತರು ಸಾಮಾಜಿಕ ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ತಿದ್ದುವ ಕೆಲಸ ಮಾಡಬೇಕು. ಆಡಳಿತ ವ್ಯವಸ್ಥೆಯಲ್ಲಿನ ಲೋಪದೋಷಗಳನ್ನ ತಮ್ಮ ಹರಿತವಾದ ಲೇಖನಿಗಳ ಮೂಲಕ ಎತ್ತಿ ತೋರಿಸಿದಾಗ ವ್ಯವಸ್ಥೆಯನ್ನುಸರಿದಾರಿಗೆತರಲುಸಾಧ್ಯವಿದೆ. ಇದರಿಂದ ಜನಸಾಮಾನ್ಯರಿಗೆ ನ್ಯಾಯ ಕೊಡಿಸಲು ಪತ್ರಕರ್ತರಿಂದ ಸಾಧ್ಯವಿದೆ ಎಂದು ಹೇಳಿದರು.

ಸುದ್ದಿಯ ಮೂಲವನ್ನ ಹುಡುಕುವುದರ ಜೊತೆಗೆ ಸತ್ಯವನ್ನ ಬೆಳಕಿಗೆ ತಂದು, ಜನಪರ ಯೋಜನೆ ಮತ್ತು ಚಿಂತನೆಗಳಿಗೆ ಚಾಲನೆ ನೀಡಲು ಪತ್ರಕರ್ತರಿಂದ ಮಾತ್ರ ಸಾಧ್ಯ ಎಂದು ಹೇಳಿದರು.

ಇಂದಿನ ತಂತ್ರಜ್ಞಾನದಿಂದ ಬದಲಾದ ಕಾಲಚಕ್ರದಲ್ಲಿ ಪತ್ರಿಕೋದ್ಯಮದಲ್ಲಿ ಬಾರಿ ಪೈಪೊಟಿ ಇದೆ. ಸುದ್ದಿ ಬಿಂಬಿಸುವ ಅವಸರದಲ್ಲಿ ಸತ್ಯವನ್ನು ಮರೆಯಬಾರದು. ಪತ್ರಿಕೋದ್ಯಮ ಇಂದು ಸಂಕಷ್ಟದಲ್ಲಿದ್ದು, ಸತ್ಯ ಹಾಗೂ ಪ್ರಾಮಾಣಿಕ ಪತ್ರಕರ್ತರು ಆರ್ಥಿಕತೆದಿಂದ ಹಿಂದುಳಿದು ಬಡತನದಲ್ಲಿಯೇ ಜೀವನ ಮುಗಿಸುತ್ತಾರೆ ಎಂದು ಕಳವಳ ವ್ಯಕ್ತಪಡಿಸಿದರು.

ಮುಖ್ಯ ಅತಿಥಿಗಳಾಗಿದ್ದ ಮಾಜಿ ಶಾಸಕ ಷಹಜಾನ ಡೊಂಗರಗಾವ ಮಾತನಾಡಿ ಸ್ವಾತಂತ್ರ್ಯ ಪೂರ್ವ ಕಾಲದಿಂದಲೂ ಪತ್ರಿಕೆಗಳು ಸಮಾಜದ ಪರಿವರ್ತನೆಯಲ್ಲಿ ಪ್ರಮುಖ ಪಾತ್ರ ವಹಿಸಿವೆ. ಸ್ವಾತಂತ್ರ್ಯದ ನಂತರವೂ ಕೂಡ ಪತ್ರಿಕಾರಂಗದಲ್ಲಿ ಅನೇಕ ಸುಧಾರಣೆಗಳನ್ನು ಕಂಡಿದೆ. ಹೊಸ ತಂತ್ರಜ್ಞಾನವನ್ನು ಬಳಸಿಕೊಂಡು ಪತ್ರಕರ್ತರು ಸತ್ಯ ನಿಷ್ಠುರ ವರದಿಗಳನ್ನು ನೀಡುವ ಮೂಲಕ ಸಮಾಜದಲ್ಲಿ ಸುಧಾರಣೆಗೆ ಪ್ರೇರಣೆಯಾಗಬೇಕು. ಪತ್ರಿಕಾ ದಿನಾಚರಣೆಯನ್ನು ಹಮ್ಮಿಕೊಳ್ಳುವ ಮೂಲಕವಿವಿಧಕ್ಷೇತ್ರಗಳಲ್ಲಿಸಾಧನೆಮಾಡಿದ ಸಾಧಕರನ್ನುಗುರುತಿಸಿಸನ್ಮಾನಿಸುತ್ತಿರುವುದು ಕೂಡಾ ಶ್ಲಾಘನೀಯ ಎಂದರು.

ಅತಿಥಿ ಉಪನ್ಯಾಸಕರಾಗಿದ್ದ ಹಿರಿಯ ಪತ್ರಕರ್ತೆ ನಿರೂಪಮ ಕೆ ಎಸ್ ಮಾತನಾಡಿ ಕನ್ನಡ ಮಾಧ್ಯಮ ಕ್ಷೇತ್ರದಲ್ಲಿ ಅತ್ಯಂತ ಪ್ರಭಾವಶಾಲಿಯಾಗಿ ತಂತ್ರಜ್ಞಾನ ಬೆಳೆದು ಸಾಮಾಜಿಕ ಜಾಲತಾಣ ಹೆಚ್ಚು ಜನಪ್ರಿಯವಾಗುತ್ತಿದೆ. ಯುವ ಪತ್ರಕರ್ತರು ಡಿಜಿಟಲ್ ಮಾಧ್ಯಮವನ್ನು ಬಳಸಿಕೊಳ್ಳಲು ಹಲವು ಅವಕಾಶಗಳಿವೆ. ಡಿಜಿಟಲ್ ಮಾಧ್ಯಮದ ಮೂಲಕ ಅನೇಕ ಪತ್ರಕರ್ತರು ಉದ್ಯೋಗ ಕಂಡುಕೊಂಡಿ–ದ್ದು, ಇವುಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆದುಕೊಂಡು ತಮ್ಮದೇ ಆದ ಡಿಜಿಟಲ್ ಮಾಧ್ಯಮವನ್ನು ರೂಪಿಸಿಕೊಂಡು ಬದುಕು ರೂಪಿಸಿಕೊಳ್ಳಬೇಕೆಂದು ಕರೆ ನೀಡಿದರು.

ಹಿರಿಯ ಪತ್ರಕರ್ತ ಸಿ. ಎ. ಇಟ್ನಾಳಮಠ ಪ್ರಾಸ್ತಾವಿಕವಾಗಿಮಾತನಾಡಿಪತ್ರಿಕೋದ್ಯಮ ನಡೆದು ಬಂದ ಧಾರಿ ಮತ್ತು ಕಾರ್ಯನಿರತ ಪತ್ರಕರ್ತರಸಂಘದಕಾರ್ಯಚಟುವಟಿಕೆಗಳು ಕುರಿತು ತಿಳಿಸಿದರು.

ಸಮಾರಂಭದ ದಿವ್ಯ ಸಾನಿಧ್ಯ ವಹಿಸಿದ್ದ ಸು–ಕ್ಷೇತ್ರ ಗಚ್ಚಿನ ಮಠದ ಶಿವಬಸವ ಸ್ವಾಮೀಜಿ ಆಶೀರ್ವಚನ ನೀಡಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ತಾಲೂಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಅಣ್ಣಾಸಾಬ ತೆಲಸಂಗ ಮಾತನಾಡಿದರು.

ಈ ಸಂದರ್ಭದಲ್ಲಿ ಹಿರಿಯ ಪತ್ರಕರ್ತ ಎಸ್ ಡಿ ಚಕ್ರವರ್ತಿ,ಸಮಾಜ ಸೇವಕರಾಮನಗೌಡ ಪಾಟೀಲ, ಮಹಿಳಾ ಸಾಹಿತಿ ಡಾ. ಅರ್ಚನಾ ಅಥಣಿ, ಅಭಿಯಂತರ ಪ್ರವೀಣ ಹುಣಸಿಕಟ್ಟಿ ಮತ್ತು ಆದರ್ಶ ಶಿಕ್ಷಕ ಎಸ್ ಕೆ ಖೋತ ಅವರನ್ನು ಸನ್ಮಾನಿಸಲಾಯಿತು.ಇದೇ ಸಂದರ್ಭದಲ್ಲಿ ಕಳೆದ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಮತ್ತು ವಿವಿಧ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಿದ ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರನೀಡಿಗೌರವಿಸಲಾಯಿತು.ಪತ್ರಿಕಾ ದಿನಾಚರಣೆಯ ಅಂಗವಾಗಿ ಮನೆ ಮನೆಗೆ ಪತ್ರಿಕೆಗಳನ್ನಹಂಚುವವಿತರಕರಿಗೆಉಡುಗ–ೊರೆ ವಿತರಿಸಲಾಯಿತು.

ಸಮಾರಂಭದಲ್ಲಿ ಪಟ್ಟಣದ ಹಿರಿಯ ವೈದ್ಯ ಡಾ. ಮಲ್ಲಿಕಾರ್ಜುನ ಹಂಜಿ, ಎಸ್ ಎಸ್ ಎಮ್ ಎಸ್ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಬಿ ಎಸ್ ಕಾಂಬಳೆ, ಡಾ. ರೇಷ್ಮಾ ಇನಾಮದಾರ. ಶಿವಾನಂದ ಕಲ್ಲಾಪುರ. ಡಾ. ಬಸಗೌಡ ಕಾಗೆ, ಎಂ ಬಿ ಮೋರಟಗಿ, ವೀರಣ್ಣ ವಾಲಿ, ಪುರಸಭೆ ಮುಖ್ಯ ಅಧಿಕಾರಿ ಅಶೋಕ ಗುಡಿಮನಿ, ರಾಮಗೊಂಡ ಪಾಟೀಲ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು. ಅಣ್ಣಾಸಾಬ ತೆಲಸಂಗ ಸ್ವಾಗತಿಸಿದರು. ವಿಜಯ ಹುದ್ದಾರ ನಿರೂಪಿಸಿದರು. ಶಿವಕುಮಾರ ಅಪರಾಜ ವಂದಿಸಿದರು.

ಖಾಸಗಿ ಕಂಪನಿಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಮೀಸಲಾತಿ ತಡೆ ವಿರೋಧಿಸಿ ಕರವೇ ಪ್ರತಿಭಟನೆ

ಹುಬ್ಬಳ್ಳಿ : ಕರ್ನಾಟಕ ಸರ್ಕಾರ ಕನ್ನಡಿಗರಿಗೆ ಉದ್ಯೋಗ ಮೀಸಲಾತಿ ವಿಧೇಯಕವನ್ನು ತಂದಿದ್ದು ಸ್ವಾಗತಾರ್ಹ. ಆದರೇ ಕೆಲ ಖಾಸಗಿ ಕಂಪನಿಗಳು ಸರ್ಕಾರ ಹೊರಡಿಸಿರುವ ವಿಧೇಯಕವನ್ನು ವಿರೋಧ ವ್ಯಕ್ತಪಡಿಸುತ್ತಿರುವುದು ಖಂಡನೀಯ ಎಂದು ನಗರದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿಂದು ಕರ್ನಾಟಕ ರಕ್ಷಣಾ ವೇದಿಕೆಯಿಂದ (ಪ್ರವೀಣ್ ಕುಮಾರ ಶೆಟ್ಟಿ ಬಣ) ಪ್ರತಿಭಟನೆ ನಡೆಸಲಾಯಿತು.

ಸರ್ಕಾರ ಹೊರಡಿಸಿರುವ ವಿಧೇಯಕವನ್ನು ಖಾಸಗಿ ಕೆಲ ಕಂಪನಿಗಳು ವಿರೋಧ ವ್ಯಕ್ತಪಡಿಸುತ್ತಿರುವುದು ಖಂಡನಾರ್ಹ. ಈ ಕೂಡಲೇ ಖಾಸಗಿ ಕಂಪನಿಗಳ ಪರವಾನಗಿಯನ್ನು ರದ್ದುಪಡಿಸಬೇಕು ಎಂದು ಹುಬ್ಬಳ್ಳಿ ತಹಶಿಲ್ದಾರರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಕರವೇ ಜಿಲ್ಲಾಧ್ಯಕ್ಷ ಮಂಜುನಾಥ ಲೂತಿಮಠ, ಹುಬ್ಬಳ್ಳಿ ತಾಲೂಕು ಅಧ್ಯಕ್ಷ ಪ್ರವೀಣ್ ಗಾಯಕವಾಡ, ಪದಾಧಿಕಾರಿಗಳಾದ ಮಂಜುನಾಥ ಹಳ್ಳಿಕೇರಿ, ಪ್ರವೀಣ್ ಮೇಟಿ ಮೊದಲಾದವರು ಪಾಲ್ಗೊಂಡಿದ್ದರು.

ಹಸು, ಎಮ್ಮೆ ಖರೀದಿಸಲು ಆರ್ಥಿಕ ನೆರವು

ಬಾಗಲಕೋಟೆ : ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು ಪ್ರಸಕ್ತ ಸಾಲಿಗೆ ರೈತ ಮಹಿಳೆಯರಲ್ಲಿ ಹೈನುಗಾರಿಕೆಗೆಯನ್ನು ಪ್ರೋತ್ಸಾಹಿಸಲು ಹಸು, ಎಮ್ಮೆ ಖರೀದಿಗೆ ಆರ್ಥಿಕ ನೆರವು ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಪ್ರಸಕ್ತ ಸಾಲಿಗೆ ಹೈನುಗಾರಿಕೆಗಾಗಿ ವಿವಿಧ ಬ್ಯಾಂಕ್‌ಗಳಲ್ಲಿ ಸಾಲ ಪಡೆಯುವ ಪ್ರತಿ ಮಹಿಳಾ ಫಲಾನುಭವಿಗಳಿಗೆ ಗರಿಷ್ಠ 65 ಸಾವಿರ ರೂ. ಸಾಲದ ಮೊತ್ತಕ್ಕೆ ಶೇ.6ರ ಬಡ್ಡಿ ಸಹಾಯಧನ (ರೂ.3625) ನೀಡುವ ಯೋಜನೆ ಇದಾಗಿದೆ. ಪ್ರಸಕ್ತ ಸಾಲಿನಲ್ಲಿ ಹೈನುಗಾರಿಕೆಗೆ ರಾಷ್ಟ್ರೀಕೃತ, ಗ್ರಾಮೀಣ ಹಾಗೂ ಸಹಕಾರ ಬ್ಯಾಂಕ್‌ಗಳಲ್ಲಿ ಸಾಲ ಪಡೆದಿರುವ ರೈತ ಮಹಿಳೆಯರು ಈ ಯೋಜನೆಯ ಸದುಪಯೋಗ ಪಡೆಯಬಹುದಾಗಿದೆ.

ಭೌತಿಕ ಗುರಿ ಪರಿಶಿಷ್ಟ ಜಾತಿ 20, ಪಂಗಡ 7 ಹಾಗೂ ಸಾಮಾನ್ಯ 82 ಇರುತ್ತದೆ ಎಂದು ಪಶು ಇಲಾಖೆಯ ಉಪನಿರ್ದೇಶಕ ಎಚ್.ಎಸ್. ಕರಡಿಗುಡ್ಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂಸಂ.08354–235634ಗೆ ಸಂಪರ್ಕಿಸಬಹುದಾಗಿದೆ.

ಶುದ್ಧ ಕುಡಿಯುವ ನೀರು ಪೂರೈಕೆಗೆ ಜಿಲ್ಲಾಧಿಕಾರಿ ಸೂಚನೆ

ಬೆಳಗಾವಿ : ಅಲ್ಲಲ್ಲಿ ಕಲುಷಿತ ಕುಡಿಯುವ ನೀರಿನಿಂದಾಗಿ ಅನೇಕ ರೀತಿಯ ಆರೋಗ್ಯ ಸಮಸ್ಯೆಗಳು ಉದ್ಭವಿಸುತ್ತಿರುವುದರಿಂದ ಕುಡಿಯುವ ನೀರು ಪೂರೈಸುವ ಮುಂಚೆ ಜಲಮೂಲಗಳಿಂದ ಸ್ಯಾಂಪಲ್ ತೆಗೆದುಕೊಂಡು ಪರೀಕ್ಷಿಸಬೇಕು. ನೀರು ಕುಡಿಯಲು ಯೋಗ್ಯವಾಗಿದ್ದರೆ ಮಾತ್ರ ಪೂರೈಸಬೇಕು ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಜರುಗಿದ ವಿವಿಧ ಇಲಾಖೆಗಳ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಗರಮತ್ತುಗ್ರಾಮೀಣಪ್ರದೇಶಗಳಲ್ಲಿರುವಜಲಮೂಲಗಳನ್ನು ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು ಮತ್ತು ಪಿಡಿಓ ಗಳು ಕಡ್ಡಾಯವಾಗಿ ಪರಿಶೀಲಿಸಬೇಕು ಎಂದು ಹೇಳಿದರು.

ವಿವಿಧ ತಾಲ್ಲೂಕುಗಳಿಗೆ ಮಂಜೂರಾಗಿರುವ ಇಂದಿರಾ ಕ್ಯಾಂಟೀನ್ ಗಳ ಸ್ಥಾಪನೆಗೆ ಲಭ್ಯವಿರುವ ಜಾಗೆಯ ಕುರಿತು ಅಧಿಕಾರಿಗಳಿಂದ ಮಾಹಿತಿಯನ್ನು ಪಡೆದುಕೊಂಡರು.

ಘನತ್ಯಾಜ್ಯ ನಿರ್ವಹಣಾ ಘಟಕಗಳ ಸ್ಥಾಪನೆಗೆ ಅಗತ್ಯ ಜಮೀನು ಒದಗಿಸುವ ನಿಟ್ಟಿನಲ್ಲಿ ತಹಶೀಲ್ದಾರರು ಆದ್ಯತೆ ಮೇರೆಗೆ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ನೆರೆಯ ಮಹಾರಾಷ್ಟ್ರ ಸೇರಿದಂತೆ ಜಿಲ್ಲೆಯಾದ್ಯಂತ ಮಳೆಯಾಗುತ್ತಿರುವುದರಿಂದ ಸಂಭವನೀಯ ಪ್ರವಾಹ ನಿರ್ವಹಣೆಗೆ ನಿಯೋಜಿಸಲಾಗಿರುವ ನೋಡಲ್ ಅಧಿಕಾರಿಗಳು ಹಾಗೂ ಇತರೆ ಅಧಿಕಾರಿಗಳು ಕಡ್ಡಾಯವಾಗಿ ಕೇಂದ್ರ ಸ್ಥಾನದಲ್ಲಿದ್ದು, ನಿಗಾ ವಹಿಸಬೇಕು ಎಂದರು.

ಅಪರ ಜಿಲ್ಲಾಧಿಕಾರಿ ವಿಜಯಕುಮಾರ್ ಹೊನಕೇರಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಲ್ಲಿಕಾರ್ಜುನ ಕಲಾದಗಿ, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಶಿವನಗೌಡ ಪಾಟೀಲ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ನವೀನ್ ಶಿಂತ್ರೆ, ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ್ ಕಂಕಣವಾಡಿ, ಎಲ್ಲ ಉಪ ವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರರು ಸಭೆಯಲ್ಲಿ ಉಪಸ್ಥಿತರಿದ್ದರು.

ದಿ. 29 ರಂದು ಜಿಲ್ಲಾ ಜಾಗೃತಿ ಶಿಬಿರ

ಬಾಗಲಕೋಟೆ : ಭವಿಷ್ಯ ನಿಧಿ, ಪಿಂಚಣಿದಾರರಿಗೆ ಸಂಬಂಧಿಸಿದಂತೆ ಕುಂದು ಕೊರತೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಜುಲೈ 29 ರಂದು ಬೆಳಿಗ್ಗೆ 9.30 ರಿಂದ ಸಂಜೆ 4 ಗಂಟೆವರೆಗೆ ಬಾದಾಮಿ ವೀರಪುಲಕೇಶಿ ವಿದ್ಯಾವರ್ಧಕ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಶಿಬಿರದಲ್ಲಿ ಪಿಎಫ್ ಸದಸ್ಯತ್ವ ಸಮಸ್ಯೆ ಮತ್ತು ಸದಸ್ಯತ್ವ ಉಳಿಸಿಕೊಳ್ಳುವ ಬಗ್ಗೆ, ವೃತ್ತಿ ಬದಲಾಯಿಸುವಾಗ ಪಿಎಂ ಹಿಂಪಡೆಯುವ ಪ್ರಯೋಜನ ಮತ್ತು ಪ್ರತಿಕೂಲ, ಹೆಸರು ಮತ್ತು ಬ್ಯಾಂಕ್ ಖಾತೆ ನಂಬರ ಸೇರಿಸುವ ಬಗೆ, ಏಕೀಕೃತ ಸದಸ್ಯತ್ವದ ಪೋರ್ಟಲ್ ಬಗ್ಗೆ ತಿಳಿಸಿಕೊಡಲಾಗುತ್ತದೆ. ಪಿಂಚಣಿದಾರರು, ಉದ್ಯೋಗಿಗಳು & ಉದ್ಯೋಗದಾತರು ತಮ್ಮ ಕುಂದುಕೊರತೆಗಳ ಪರಿಹಾರಕ್ಕೆ ಮತ್ತು ಹೆಚ್ಚಿನ ಮಾಹಿತಿಗಾಗಿ sro.raichur@epfindia.gov.in ಮತ್ತು do.bagalkot@epfindia.gov.in ಸಂಪರ್ಕಿಸುವಂತೆ ಪ್ರಾದೇಶಿಕ ಕಚೇರಿಯ ಪಿಎಫ್ ಕಮೀಷನರ್–2 ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಚಿನ್ನಾಭರಣ ಅಂಗಡಿ ಕಳ್ಳತನ

ಹುಬ್ಬಳ್ಳಿ : ಗ್ಯಾಸ್ ಕಟರ್ ಬಳಸಿ ಬಂಗಾರದ ಅಂಗಡಿ ಕೀಲಿ ಮುರಿದು ಲಕ್ಷಾಂತರ ರೂಪಾಯಿ ಮೌಲ್ಯದ ಬಂಗಾರ ಹಾಗೂ ಬೆಳ್ಳಿ ಆಭರಣಗಳನ್ನು ಕಳ್ಳತನ ಮಾಡಿದ ಘಟನೆ ಕೇಶ್ವಾಪುರದಲ್ಲಿ ನಡೆದಿದೆ.

ನಗರದ ಕೇಶ್ವಾಪುರದಲ್ಲಿರುವ ಜಗದೀಶ್ ದೈವಜ್ಞ ಎಂಬುವರಿಗೆ ಸೇರಿದ ಭುವನೇಶ್ವರಿ ಜ್ಯುವೆಲರಿಯ ಕೀಲಿಯನ್ನು ಗ್ಯಾಸ್ ಕಟ್ಟರ್ ನಿಂದ ತುಂಡು ಮಾಡಿ, ನಂತರ ಗ್ಲಾಸ್ ಒಡೆದು ಒಳನುಗ್ಗಿದ ಕಳ್ಳರು 800 ಗ್ರಾಮ್ ಚಿನ್ನ ಮತ್ತು 50 ಕೆ.ಜಿ ಬೆಳ್ಳಿ ಕಳ್ಳತನ ಮಾಡಿದ್ದಾರೆ.

ಬೆಳಗಿನ ಜಾವ 2 ಗಂಟೆ ವೇಳೆಗೆ ಕಳ್ಳತನ ನಡೆದಿರುವ ಸಾಧ್ಯತೆ ಇದೆ. ಮೊದಲು ಸಿಸಿ ಕ್ಯಾಮೆರಾಕ್ಕೆ ಸ್ಪ್ರೇ ಮಾಡಿ ನಂತರ ಕಳ್ಳತನ ಮಾಡಲಾಗಿದೆ ಎನ್ನಲಾಗಿದೆ.

ಘಟನಾ ಸ್ಥಳಕ್ಕೆ ಹು–ಧಾ ಪೊಲೀಸ್ ಆಯುಕ್ತ ಶಶಿಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಇಬ್ಬರು ವ್ಯಕ್ತಿಗಳಿಂದ ಕಳ್ಳತನ ನಡೆದಿರುವ ಸಾಧ್ಯತೆಗಳಿವೆ. ಒಂದು ಸಿಸಿ ಕ್ಯಾಮೆರಾದಲ್ಲಿ ಇಬ್ಬರು ವ್ಯಕ್ತಿಗಳ ದೃಶ್ಯಗಳು ಸೆರೆಯಾಗಿವೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದೇವೆ ಎಂದು ಪೊಲೀಸ್ ಆಯುಕ್ತ ಶಶಿಕುಮಾರ್ ಹೇಳಿದ್ದಾರೆ.

ಡೆಂಗ್ಯೂ ನಿಯಂತ್ರಣದ ಜಿಲ್ಲಾ ಟಾಸ್ಕ್ ಫೋರ್ಸ ಸಮಿತಿ ಸಭೆ

ಧಾರವಾಡ : ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಡೆಂಗ್ಯೂ ಪರಿಸ್ಥಿತಿಯ ದೈನಂದಿನ ನಿಗಾವಣೆಗಾಗಿ ರಚಿಸಿರುವ ಜಿಲ್ಲಾ ಮಟ್ಟದ ಟಾಸ್ಕ್ ಫೋರ್ಸ ಸಮಿತಿ ಸಭೆ ಜರುಗಿತು.

ಸಭೆಯಲ್ಲಿ ಜಿಲ್ಲಾಧಿಕಾರಿಗಳು ಮಾತನಾಡಿ, ಡೆಂಗ್ಯೂ ಹಾಟಸ್ಪಾಟಗಳನ್ನು ಗುರುತಿಸಿ, ಆ ಸ್ಥಳಗಳಲ್ಲಿ ಲಾರ್ವಾನಾಶ, ಜಾಗೃತಿ ಕಾರ್ಯಕ್ರಮ ಆಯೋಜಿಸಬೇಕು. ಕಟ್ಟಡ ನಿರ್ಮಾಣ ಕಾಮಗಾರಿ ಸ್ಥಳಗಳಲ್ಲಿ ನೀರು ಸಂಗ್ರಹ ಆಗದಂತೆ ಮುನ್ನೆಚ್ಚರಿಕೆವಹಿಸಿ, ಸ್ವಚ್ಚತೆಗೆ ಆದ್ಯತೆ ನೀಡಬೇಕು ಎಂದು ಅವರು ಹೇಳಿದರು

ಶನಿವಾರ ಸ್ವಚ್ಚತಾ ಅಭಿಯಾನ: ಜಿಲ್ಲೆಯ ಎಲ್ಲ ಪ್ರಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಪ್ರತಿ ಶನಿವಾರ ಸ್ವಚ್ಚತಾ ಅಭಿಯಾನ ಕೈಗೊಳ್ಳಬೇಕು. ಮಕ್ಕಳಲ್ಲಿ ಡೆ–ಂಗ್ಯೂ ಜಾಗೃತಿಮೂಡಿಸಬೇಕು ಮತ್ತು ಈ ಕಾರ್ಯಕ್ರಮ ಶಾಲೆಯ ಎಸ್‌ಡಿಎಂಸಿ ಸದಸ್ಯರನ್ನು ಆಹ್ವಾನಿಸಬೇಕೆಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ನಿರ್ದೇಶಿಸಿದರು.

ನಿರಂತರ ಜ್ವರವಿದ್ದರೆ ಆಸ್ಪತ್ರೆಗೆ ಬನ್ನಿ: ಜ್ವರ ಬಂದಾಗ ಆಸ್ಪತ್ರೆಗೆ ಬಂದು ಪರೀ–ಕ್ಷೆ ಮಾಡಿಸಿಕೊಳ್ಳಬೇಕು. ವೈದ್ಯರ ಸಲಹೆ ಮೇರೆಗೆ ಅಗತ್ಯವಿದ್ದರೆ ರಕ್ತ ಪರೀಕ್ಷೆ ಮಾಡಿಸಿಕೊಳ್ಳಬೇಕು. ನೋಂದಾಯಿತ ಖಾಸಗಿ ಆಸ್ಪತ್ರೆಗಳು ಪರೀಕ್ಷೆಗೆ ಒಳಪಡುವ ರೋಗಿಗಳ ಬಗ್ಗೆ ಸರಿಯಾದ ಮಾಹಿತಿ ನೀಡಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ನಕಲಿ ವೈದ್ಯರ ಪತ್ತೆಗೆ ಕ್ರಮವಹಿಸಿ: ನಗರ ಹಾಗೂ ಗ್ರಾಮೀಣ ಭಾಗದಲ್ಲಿ ನಕಲಿ ವೈದ್ಯರು ಪ್ರ್ಯಾಕ್ಟಿಸ್ ಮಾಡುತಿದ್ದಾರೆ ಎಂಬ ದೂರುಗಳು ಬರುತ್ತಿವೆ. ಕೆಲವು ಹೊಮಿಯೊಪತಿ ವೈದ್ಯರು ಅಲೋಪತಿ ಔಷಧಿ ನೀಡುತ್ತಿರುವ ಬಗ್ಗೆ ತಿಳಿದು ಬಂದಿದೆ.

ಈ ಕುರಿತು ಜಿಲ್ಲಾ ಆರೋಗ್ಯ ಇಲಾಖೆ ತುರ್ತುಕ್ರಮ ವಹಿಸದಿದ್ದರೆ ಇಲಾಖೆ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಜರುಗಿಸುವದಾಗಿ ಜಿಲ್ಲಾಧಿಕಾರಿಗಳು ಎಚ್ಚರಿಸಿದರು.

ಡೆಂಗ್ಯೂ ಪರೀಕ್ಷೆ ದರದ ಬಗ್ಗೆ ಆಸ್ಪತ್ರೆಯಲ್ಲಿ ಪ್ರಕಟಿಸಿ: ಪ್ರತ

ಮಕ್ಕಳಿಗೆ ಕಾಯಕದ ಮಹತ್ವ ತಿಳಿಸಿರಿ

ರಬಕವಿ–ಬನಹಟ್ಟಿ : ಹನ್ನೆರಡನೆಯ ಶತಮಾನದ ಶರಣರು ಕಾಯಕ ನಿಷ್ಠರಾಗಿದ್ದರು. ಅವರ ಕಾಯಕ ಮತ್ತು ದಾಸೋಹ ಸಿದ್ಧಾಂತ ಇಂದಿನ ದಿನಗಳಲ್ಲಿ ಹೆಚ್ಚು ಪ್ರಸ್ತುತವಾಗಿವೆ. ಹಡಪದ ಅಪ್ಪಣ್ಣಪ್ಪ ಸಮಾಜ ಬಾಂಧವರು ಇಂದಿಗೂ ಕಾಯಕ ಜೀವಿಗಳಾಗಿದ್ದಾರೆ ಎಂದು ರಬಕವಿ ಬನಹಟ್ಟಿ ತಹಶೀಲ್ದಾರ್ ಗಿರೀಶ ಸ್ವಾದಿ ತಿಳಿಸಿದರು.

ಅವರು ಶನಿವಾರ ಇಲ್ಲಿನ ತಹಶೀಲ್ದಾರ್ ಕಾರ್ಯಾಲಯದಲ್ಲಿ ನಡೆದ ಹಡಪದ ಅಪ್ಪಣ್ಣಪ್ಪ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಹಡಪದ ಅಪ್ಪಣ್ಣಪ್ಪನಂಥ ಶ್ರೇಷ್ಠ ಶರಣರ ತತ್ವ ಸಿದ್ಧಾಂತಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದರ ಜೊತೆಗೆ ಶರಣರ ವಚನಗಳನ್ನು ಮತ್ತು ಅವರ ಕಾಯಕ ಸಿದ್ಧಾಂತವನ್ನು ನಮ್ಮ ಮಕ್ಕಳಿಗೂ ಹೇಳುವ ಮೂಲಕ ಮುಂದಿನ ಜನಾಂಗಕ್ಕೆ ಶರಣರ ಪರಿಚಯವನ್ನು ಮಾಡಿಕೊಡಬೇಕು ಎಂದು ತಹಶೀಲ್ದಾರ್ ಸ್ವಾದಿ ತಿಳಿಸಿದರು.

ಶಿರಸ್ತೆದಾರ ಎಸ್.ಎಲ್. ಕಾಗಿಯವರ, ಶೋಭಾ ಕೂಗಾಟೆ, ಪ್ರಕಾಶ ಮಠಪತಿ, ಸದಾಶಿವ ಕುಂಬಾರ, ಸಮಾಜದ ಮುಖಂಡರಾದ ಬುದ್ದಪ್ಪ ಬಸಪ್ಪ ಕುಂದಗೋಳ, ಲಕ್ಕಪ್ಪ ನಾವಿ, ಪ್ರಕಾಶ ನಾವಿ, ಮಹಾದೇವ ನಾವಿ, ಕುಮಾರ ನಾವಿ, ಹನಮಂತ ನಾವಿ, ಪ್ರಭು ನಾವಿ, ಮಲ್ಲಪ್ಪ ನಾವಿ, ಅಶೋಕ ಹುನ್ನೂರ, ಬಸು ನಾವಿ, ಕಾಡಪ್ಪ ನಾವಿ, ಸದಾಶಿವ ನಾವಿ, ಹಿಪ್ಪರಗಿ ಸೇರಿದಂತೆ ತಾಲ್ಲೂಕಿನ ಹಡಪದ ಸಮಾಜದ ಪ್ರಮುಖರು ಉಪಸ್ಥಿತರಿದ್ದರು.

ವಿಚಾರ ಸಂಕೀರ್ಣ ಕಾರ್ಯಕ್ರಮ

ಎಲ್ಲ ಭಾಷೆಯನ್ನು ಗೌರವಿಸಿ ಕನ್ನಡವನ್ನು ಪ್ರೀತಿಸಿ: ಬೆನ್ನೂರ

ಮಹಾಲಿಂಗಪುರ : ಜಗತ್ತಿನ ಎಲ್ಲ ಭಾಷೆಗಳನ್ನು ಗೌರವಿಸಿ, ಮಾತೃಭಾಷೆ ಕನ್ನಡವನ್ನು ಪ್ರೀತಿಸಿ ಎಂದು ಬನಹಟ್ಟಿಯ ಎಸ್.ಟಿ.ಸಿ ಕಾಲೇಜಿನ ಇತಿಹಾಸ ವಿಭಾಗದ ಸಹ ಪ್ರಾಧ್ಯಾಪಕ ಡಾ.ಎಮ್. ಎನ್.ಬೆನ್ನೂರ ಹೇಳಿದರು.

ಪಟ್ಟಣದ ಕೆ.ಎಲ್.ಇ ಸಂಸ್ಥೆಯ ಎಸ್.ಸಿ.ಪಿ ಕಲಾ,ವಿಜ್ಞಾನ ಮತ್ತು ಡಿ.ಡಿ ಶಿರೋಳ ವಾಣಿಜ್ಯ ಪದವಿ ಮಹಾವಿದ್ಯಾಲಯದಲ್ಲಿ ಇಂಗ್ಲೀಷ ವಿಭಾಗದ ವತಿಯಿಂದ ಎ.ಆಯ್ ಇನ್ ಇಂಗ್ಲೀಷ ಟಿಚಿಂಗ್ ಆಂಡ್ ಲರ್ನಿಂಗ್ ಹಾಗೂ ಇತಿಹಾಸ ವಿಭಾಗದಿಂದ ಕರ್ನಾಟಕ ಏಕೀಕರಣ ಚಳುವಳಿ ವಿಷಯದ ಕುರಿತು ರಾಜ್ಯ ಮಟ್ಟದ ಒಂದು ದಿನದ ವಿಚಾರ ಸಂಕೀರ್ಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಎಸ್.ವಿ.ಎಮ್. ಕಾಲೇಜ ಇಳಕಲ್‌ನ ಇಂಗ್ಲೀಷ ವಿಭಾಗದ ಸಹ ಪ್ರಾಧ್ಯಾಪಕ ಡಾ. ಎಸ್.ಬಿ. ಬಿರಾದಾರ ಮಾತನಾಡಿ ಎ.ಆಯ್ ಬಂದು ಜನರ ಉದ್ಯೋಗಗಳನ್ನು ಕಸಿದುಕೊಂಡಿತು,

ಮನುಷ್ಯನ ಜೊತೆ ಇಂದು ಮಶೀನ್ ಸ್ಪರ್ಧೆಗೆ ಇಳಿದಿದೆ. ವಿದ್ಯಾರ್ಥಿಗಳು ಎ.ಆಯ್‌ಗಿಂತ ಜೋರಾಗಿರಬೇಕು, ಕನ್ನಡವನ್ನು ಉಳಿಸಿ ಬೆಳಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಅಧ್ಯಕ್ಷತೆವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಡಾ.ಕೆ.ಎಮ್. ಅವರಾದಿ ಮಾತನಾಡಿ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕಾಗಿ ಈ ವಿಚಾರ ಸಂಕೀರ್ಣವನ್ನು ಆಯೋಜಿಸಲಾಗಿದೆ.

ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಇತರ ಚಟುವಟಿಕೆಗಳಲ್ಲಿ ಭಾಗವಹಿಸಿ ಹೆಚ್ಚಿನ ಜ್ಞಾನ ಬೆಳಸಿಕೋಳ್ಳಿ ಎಂದರು.

ಇಂಗ್ಲೀಷ ವಿಭಾಗ : ಎ.ಆಯ್ ಇನ್ ಇಂಗ್ಲೀಷ ಟಿಚಿಂಗ್ ಆಂಡ್ ಲರ್ನಿಂಗ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ನಿಡಸೋಸಿಯ ಎಸ್.ಎನ್.ಜಿ.ಪಿ ಎಸ್.ಎನ್. ಎಮ್.ಎಸ್ ಪದವಿ ಕಾಲೇಜಿನ ವಿದ್ಯಾರ್ಥಿನಿ ಖುಷಿ ಬೊಸಲೆ ಪ್ರಥಮ, ಮೂಗಳಖೋಡದ ಡಾ.ಸಿ.ಬಿ ಕುಲಗೂಡ ಕಾಲೇಜಿನ ವಿದ್ಯಾರ್ಥಿನಿ ಸೃಷ್ಠಿ ಗಾಣಗೇರ ದ್ವಿತೀಯ, ಜೆ.ಎಸ್. ಎಸ್.ಬನಶಂಕರಿ ಕಾಲೇಜಿನ ವಿದ್ಯಾರ್ಥಿನಿ ಕೀರ್ತನಾ ದೊಡ್ಡಮನಿ ತೃತೀಯ ಸ್ಥಾನ ಪಡೆದುಕೊಂಡರು.

ಇತಿಹಾಸ ವಿಭಾಗ : ಕರ್ನಾಟಕ ಏಕೀಕರಣ ಚಳುವಳಿ ಸ್ಪರ್ಧೆಯಲ್ಲಿ ಕುಮಟಾದ ಕಮಲಾ ಬಳಿಗಾಕಾಲೇಜಆಪ್‌ಎಜುಕೇಶನ್ ಕಾಲೇಜಿನ ವಿದ್ಯಾರ್ಥಿ ಮಹೇಶ ಶಿವಾಜಿ ಕಲ್ಯಾಣಕರ ಪ್ರಥಮ, ಜಮಖಂಡಿಯ ಜಿ.ಎಪ್.ಜಿ.ಸಿ ಕಾಲೇಜಿನ ವಿದ್ಯಾರ್ಥಿನಿ ಭಾಗಿರಥಿ ಆಲಗೂರ ದ್ವಿತೀಯ, ಹಾಗೂ ಜಮಖಂಡಿ ಬಿ.ಎಲ್.ಡಿ.ಇ ಕಾಲೇಜಿನ ವಿದ್ಯಾರ್ಥಿನಿ ಪ್ರೀತಿಕಾ ಮಂಜರಗಿ ತೃತೀಯ ಸ್ಥಾನ ಪಡೆದುಕೊಂಡರು.

ಸ್ಥಳಿಯ ಆಡಳಿತ ಮಂಡಳಿ ಸದಸ್ಯರಾದ ಎ.ಬಿ.ಅಂಗಡಿ, ಸಂತೋಷ ಹುದ್ದಾರ ಐಕ್ಯೂಎಸಿ ಸಂಯೋಜಕರಾದ ಡಾ. ಎಸ್. ಡಿ. ಸೊರಗಾಂವಿ, ಇಂಗ್ಲೀಷ ವಿಭಾಗ ಮುಖ್ಯಸ್ಥರಾದ ವಿ.ಎ.ಅಡಹಳ್ಳಿ, ಇತಿಹಾಸ ವಿಭಾಗ ಮುಖ್ಯಸ್ಥರಾದ ಟಿ.ಡಿ.ಡಂಗಿ, ಉಪನ್ಯಾಸಕರಾದ ಸಿ.ಎಮ್. ಐಗಳಿ, ಎ.ಎಮ್. ಉಗಾರೆ, ಪಿ.ಎಸ್.ಹಿಪ್ಪರಗಿ, ಎಸ್.ಸಿ.ಬಿಜ್ಜರಗಿ, ಎಸ್. ಎಸ್.ಮುಗಳ್ಯಾಳ, ಬಿ.ಎನ್. ಹಂದಿಗುಂದ, ಆರ್.ಕೆ.ಕಲ್ಲೋಳಿ, ರಾಜು ಚೌಗಲಾ ಸೇರಿದಂತೆ ಹಲವರು ಇದ್ದರು.

ಕನ್ನಡಿಗರ ಆಶಯ ಹುಸಿಯಾಗದಿರಲಿ

ರಾಯಬಾಗ : ಖಾಸಗಿ ವಲಯದ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಮೀಸಲು ಸಿಗಬೇಕು ಎಂಬ ಸರೋಜನಿ ಮಹಿಷಿ ವರದಿಯ ಬೇಡಿಕೆಯನ್ನು ಸಾಕಾರಗೊಳಿಸಲು ಸದ್ಯ ರಾಜ್ಯ ಸರಕಾರದ ಸಂಪುಟದಲ್ಲಿ ಅನುಮೋದನೆ ಸಿಕ್ಕಿದರೂ ಇದಕ್ಕೆ ಕೆಲವರಿಂದ ಅಪಸ್ವರ ಆಕ್ಷೇಪಗಳು ಉದ್ಭವಿಸಿದ ಪರಿಣಾಮ ಸರಕಾರ ತನ್ನ ನಿಲುವನ್ನು ತಾತ್ಕಾಲಿಕ ತಡೆಹಿಡಿದಿರುವುದು ಕನ್ನಡಿಗರಿಗೆ ಈಗ ನಿರಾಶೆಯ ಕಾರ್ಮೋಡ ಕವಿದಂತಾಗಿದ್ದು ಸ್ಪಟಿಕ ಸ್ಪಷ್ಟ. ಕನ್ನಡ ನೆಲದಲ್ಲಿ ಕನ್ನಡಿಗರಿಗೆ ಬಹುಪಾಲು ಉದ್ಯೋಗಾವಕಾಶಗಳು ಸಿಗಬೇಕು, ಸರಕಾರ ಇಲ್ಲಿನ ನೆಲ ಜಲ ಸಂಸ್ಕೃತಿಯನ್ನು ರಕ್ಷಣೆ ಮಾಡಿದರೆ ಸಾಲದು,

ನಮ್ಮ ಕನ್ನಡಿಗರಿಗೆ ಬದುಕು ಕಟ್ಟಿಕೊಳ್ಳಲು ಖಾಸಗಿ ವಲಯಗಳಲ್ಲಿ ಹೆಚ್ಚೆಚ್ಚು ಉದ್ಯೋಗಗಳು ಸಿಗಲು ಸರಕಾರ ಆದ್ಯ ಗಮನ ನೀಡಬೇಕು.ನಮ್ಮ ನೆಲದಲ್ಲಿಯೇ ನಮ್ಮ ಬದುಕು ಚೆನ್ನಾಗಿ ರೂಪುಗೊಳ್ಳಬೇಕು. ಕನ್ನಡಿಗರ ಹಿತ ರಕ್ಷಣೆಯೇ ನಮ್ಮ ಮೊದಲ ಆದ್ಯತೆ ಎಂದು ಅರಿತುಕೊಂಡು "ನಮ್ಮದು ಪೂರ್ಣ ಕನ್ನಡ ಸರಕಾರ "ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ರಾಜ್ಯ ಸರಕಾರ ಪ್ರಸ್ತುತ ಪಕ್ಷಾತೀತವಾಗಿ ಈ ಮೀಸಲು ಹೋರಾಟದಿಂದ ಹಿಂದಕ್ಕೆ ಸರಿಯದೆ ಜಗ್ಗದೆ ಕುಗ್ಗದೆ ಪ್ರಬಲ ಇಚ್ಛಾ ಶಕ್ತಿ ಪ್ರದರ್ಶಿಸಿ ಕನ್ನಡಿಗರ ಹಿತ ಕಾಯಬೇಕಾಗಿದೆ.

ಆಡಳಿತ ಪಕ್ಷದವರು ಒಗ್ಗಟ್ಟು ಪ್ರದರ್ಶಿಸಿ ಕಾನೂನು ಹೋರಾಟ ಮೂಲಕ ಈ ಮೀಸಲು ಆಶಯ ಸಾಕಾರಗೊಳಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಲಿ. ಕನ್ನಡ ಭಾಷಿಕರಿಗೆ ಯಥೇಚ್ಛವಾಗಿ ನ್ಯಾಯ ಸಿಗಬೇಕು ಎಂಬ ಬಹು ಕೋಟಿ ಕನ್ನಡಿಗರ ಬಹುದಿನದ ಅಂತರಂಗದ ಆಶಯ ಎಂದಿಗೂ ಹುಸಿಯಾಗದಿರಲಿ.

–ಡಾ. ಜಯವೀರ ಎ.ಕೆ.
ಖೇಮಲಾಪುರ

ಗುರುಕುಲದ ಶಿಕ್ಷಣ ನವ ಸಮಾಜದ ನಿರ್ಮಾಣಕ್ಕೆ ಪೇರಣೆ: ಪೂಜಾ ಪಾರ್ಶಿ

ಮೂಡಲಗಿ : ಗುರುಕುಲದಲ್ಲಿ ಮಕ್ಕಳ ಶಿಕ್ಷಣದ ಜೊತೆಗೆ ಸಂಸ್ಕೃತಿ ಮತ್ತು ಆಧ್ಯಾತ್ಮದ ಅರಿವು ಹಾಗೂ ವೈಚಾರಿಕತೆಯ ಜೀವನಕ್ಕೆ ಸ್ಫೂತಿಯನ್ನು ನೀಡಲು ವೇದಗಳಿಂದ ಆಧುನಿಕ ಬದುಕಿನ ಮೌಲ್ಯಗಳನ್ನು ಅರಿಯಲು ಸಾಧ್ಯವಿದೆ ಮಕ್ಕಳಲ್ಲಿ ಗುರುಕುಲದ ಪರಿಭಾವನೆಯನ್ನು ಬೆಳಸುವುದು ಅವಶ್ಯಕವಾಗಿದೆ ಎಂದು ಮೂಡಲಗಿ ಆರ್.ಡಿ.ಸಂಸ್ಥೆಯ ಉಪಾಧ್ಯಕ್ಷೆ ಪೂಜಾ ಪಾರ್ಶಿ ಹೇಳಿದರು.

ಪಟ್ಟಣದ ಆರ್‌ಡಿಎಸ್ ಶ್ರೀವಿದ್ಯಾನಿಕೇತನ ಪ್ರಾಥಮಿಕ ಮತ್ತು ಪ್ರೌಢ ವಸತಿ ಶಾಲೆಯಲ್ಲಿ ಗುರುಪೌರ್ಣಿಮೆಯ ನಿಮಿತ್ಯವಾಗಿ ಮಕ್ಕಳಿಗೆ ಗುರುಕುಲ ಅಣುಕು ಪ್ರದರ್ಶನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಗುರುಕುಲದ ಶಿಕ್ಷಣ ನವ ಸಮಾಜದ ನಿರ್ಮಾಣಕ್ಕೆ ಪೇರಣೆಯಾಗಿದ್ದು ಮಕ್ಕಳ ಕಲಿಕೆ ಗುರುಗಳ ಕುಟೀರದಲ್ಲಿ ನಡೆದಾಗ ವ್ಯಕ್ತಿತ್ವ ವಿಕಸನಕ್ಕೆ ಪೇರಣೆಯಾಗಲಿದ್ದು ನಮ್ಮ ಭಾರತೀಯ ಶಿಕ್ಷಣವು ಗುರುಕುಲದ ಮೂಲಕ ಪ್ರಾರಂಭವಾಗಿರುವ ಚರಿತ್ರೆ ಇದೆ.

ಇಂದಿನ ಜೀವನ ನಮ್ಮ ಸಂಸ್ಕೃತಿಯನ್ನು ಮರೆಮಾಚುವಂತಿದ್ದು ಇಂತಹ ಕಾರ್ಯಕ್ರಮಗಳನ್ನು ಆಯೋಜಿಸ ಮಕ್ಕಳಲ್ಲಿ ಭಾರತೀಯ ಸಂಸ್ಕೃತಿಯನ್ನು ಪರಿಚಯಿಸುವುದು ಅವಶ್ಯಕವಿದೆ ಎಂದರು.

ಪದವಿ ಕಾಲೇಜಿನ ಪ್ರಾಚಾರ್ಯ ಸತೀಶ ಗೋಟೂರ ಮಾತನಾಡಿ ಮಕ್ಕಳಲ್ಲಿ ಇಂದು ಕಲಿಕೆ ಯಾಂತ್ರಿಕವಾಗಿದ್ದು ಇದರಿಂದ ನಮ್ಮ ಭಾರತೀಯ ಪದ್ದತಿಗಳು ಮತ್ತು ಮೌಲ್ಯಗಳು ಅವರಲ್ಲಿ ಬೆಳೆಯುತ್ತಿಲ್ಲ ಇಂತಹ ಚಟುವಟಿಕೆಗಳನ್ನು ನೀಡಿ ಮಕ್ಕಳಿಗೆ ಪ್ರೋತ್ಸಾಹಿಸುವುದು ಅವಶ್ಯವಿದೆ ಎಂದರು.

ಕಾರ್ಯಕ್ರಮದಲ್ಲಿ ಶಾಲೆಯ ಪ್ರಧಾನ ಗುರು ಸಂಗಮೇಶ ಹಳ್ಳೂರ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ಸಂತೋಷ ಪಾರ್ಶಿ ವಹಿಸಿಕೊಂಡು ಮಾತನಾಡಿ ಪುಸ್ತಕದ ಜ್ಞಾನದ ಜೊತೆಗೆ ನಮ್ಮ ಸಂಸ್ಕೃತಿ ಸಂಪ್ರದಾಯ ಹಾಗೂ ಪ್ರಾಚೀನತೆಯ ಪರಿಕಲ್ಪನೆ ನೀಡವ ಜ್ಞಾನದ ವಿಕಾಸದ ಜೊತೆಗೆ ಭಾರತೀಯ ಸಿದ್ಧಾಂತಗಳ ವಿಕಾಸವನ್ನು ಮಕ್ಕಳಲ್ಲಿ ಸೃಷ್ಟಿಸಿ ಅವರಲ್ಲಿ ಬೆಳಸುವುದು ಅವಶ್ಯ ವಿದೆ ಎಂದರು.

ಕಾರ್ಯಕ್ರಮದಲ್ಲಿ ಉಮೇಶ ಪುಟ್ಟಿ, ಎ.ಆರ್.ಹೆಳವಿ ವಿಜಯಲಕ್ಷ್ಮೀ ಪತ್ತಾರ ಎಸ್ ಎಸ್ ಮಾಲಗಾರ ಬಿ.ವಾಯ್. ಮಾಳೇದ ಹಾಜರಿದ್ದರು ಶಿಕ್ಷಕಿ ಪೂಜಾ ಪಾಟೀಲ ಸ್ವಾಗತಿಸಿದರು ಶಿಕ್ಷಕಿ ವಂದನಾ ನಿಡಗುಂದಿ ನಿರೂಪಿಸಿ ವಂದಿಸಿದರು.

ವ್ಯಸನಮುಕ್ತ ದಿನಾಚರಣೆಗೆ ಸರಕಾರದ ಕಟ್ಟುನಿಟ್ಟಿನ ಆದೇಶ

ಇಳಕಲ್ : ಸಮಾಜ ಸುಧಾರಣೆಗಾಗಿ, ನಾಡಿನ ಒಳಿತಿಗಾಗಿ, ಬಸವತತ್ವ ಆಚರಣೆಗಾಗಿ ಜೀವವನ್ನೇ ಸವೆಸಿದ ಡಾ.ಮಹಾಂತ ಶಿವಯೋಗಿಗಳವರ ಜನ್ಮದಿನ ಆ.1ನ್ನು ರಾಜ್ಯಾದ್ಯಂತ ವ್ಯಸನಮುಕ್ತ ದಿನಾಚರಣೆಯನ್ನಾಗಿ ಆಚರಿಸಲು ಸರಕಾರ ಜು.22 ರಂದು ಪುನ: ಕಟ್ಟುನಿಟ್ಟಿನ ಆದೇಶ ಹೊರಡಿಸಿದೆ.

2022 ಮೇ.23 ರಂದು ಹೊರಡಿಸಿದ ಆದೇಶದ ಪ್ಯಾರಾ(1)ನ್ನು ಪರಿಷ್ಕರಿಸಿ ಇಂದಿನ ಹೊಸ ಆದೇಶದಂತೆ ಸರಕಾರ ನೂತನ ಸಮಿತಿಯೊಂದನ್ನು ರಚಿಸಿದ್ದು, ಪ್ರತಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆ ಹಾಗೂ ಜಿಲ್ಲಾ ಉಪನಿರ್ದೇಶಕರು, ಸಹಾಯಕ ನಿರ್ದೇಶಕರು, ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ ಅವರನ್ನು ಸದಸ್ಯ ಕಾರ್ಯದರ್ಶಿ ಯನ್ನಾಗಿ ಹಾಗೂ ಜಿ.ಪಂ .ಸಿ.ಇ.ಓ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಉಪ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ ಜಿಲ್ಲಾ ಅಧಿಕಾರಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ, ಜಿಲ್ಲೆಯ ತಾಲೂಕು ತಹಸೀಲ್ದಾರ್‌ರನ್ನು



ಸದಸ್ಯರನ್ನಾಗಿ ಮಾಡಿ ಆದೇಶ ಹೊರಡಿಸಿದೆ. ಇನ್ನು ಕಾರ್ಯಕ್ರಮ ಆಯೋಜಿಸುವ ಸಲುವಾಗಿ ಜಿಲ್ಲಾ ಮಟ್ಟಕ್ಕೆ 50 ಸಾವಿರ(31 ಜಿಲ್ಲೆಗಳಿಗೆ), ತಾಲೂಕು ಮಟ್ಟಕ್ಕೆ 17 ಸಾವಿರ(239 ತಾಲ್ಲೂಕು) ಹಾಗೂ ರಾಜ್ಯಮಟ್ಟಕ್ಕೆ 3.87 ಲಕ್ಷ ರೂ ದಂತೆ ಒಟ್ಟು 60 ಲಕ್ಷ ಅನುದಾನವನ್ನೂ ನಿಗದಿಪಡಿಸಿದೆ.

ವ್ಯಸನಮುಕ್ತ ಸಮಾಜ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಹಿರಿದಾದುದು. ಇಂದಿನ ಯುವಕರೇ ನಾಳಿನ ನಾಡಿನ ನಾಯಕರು, ಅವರಿಂದಲೇ ನಾಡಿನ, ದೇಶದ ಭವಿಷ್ಯ. ಆದ್ದರಿಂದ ಶಾಲಾ–ಕಾಲೇಜುಗಳಲ್ಲಿ ದುಶ್ಚಟಗಳಿಂದಾಗುವ ದುಷ್ಪರಿಣಾಮಗಳ ಕುರಿತು ಯುವಕರಲ್ಲಿ ತಿಳುವಳಿಕೆಮೂಡಿಸುವ ಮೂಲಕ ಸಮಾಜವನ್ನು ಜಾಗೃತಗೊಳಿಸುವ, ಭವಿಷ್ಯತ್ತಿನ ಬದುಕನ್ನು ರೂಪಿಸಿಕೊಳ್ಳುವ ಯುವಕರಲ್ಲಿ ಪ್ರೇರಣೆ ನೀಡುವ ಪ್ರಾಮಾಣಿಕ ಪ್ರಯತ್ನ ಶಿಕ್ಷಕರು ಮಾಡಬೇಕಿದೆ. ದಯವಿಟ್ಟು ಮಕ್ಕಳಲ್ಲಿ ದುಶ್ಚಟಗಳ ಬಗ್ಗೆ ಅರಿವನ್ನು ಮೂಡಿಸಬೇಕೆಂದು ಶಿಕ್ಷಕರಲ್ಲಿ ವಿನಂತಿಸುತ್ತೇವೆ.

। ಪೂಜ್ಯ ಶ್ರೀ ಮ.ನಿ.ಪ್ರ. ಗುರುಮಹಾಂತಶ್ರೀಗಳು, ಚಿತ್ತರಗಿ ಶ್ರೀವಿಜಯ ಮಹಾಂತೇಶ ಸಂಸ್ಥಾನಮಠ, ಇಳಕಲ್.

ನೂತನ ಆದೇಶದ ಕಾರ್ಯಕ್ರಮದ ಮಾರ್ಗಸೂಚಿಯಂತೆ ಡಾ.ಮಹಾಂತ ಶಿವಯೋಗಿಗಳ ಭಾವಚಿತ್ರ ಅನಾವರಣ ಮಾಡಿ ಗೌರವ ವಂದನೆ ಅರ್ಪಿಸುವುದು, ಜಿಲ್ಲೆಯ ಎಲ್ಲ ಇಲಾಖೆಗಳ, ಸ್ಥಳೀಯ ಸಂಘ ಸಂಸ್ಥೆಗಳ ಸಹಯೋಗದಡಿ ಮಧ್ಯ ಹಾಗೂ ಮಾದಕ ವಸ್ತುಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜನರಲ್ಲಿ ಜಾಗೃತಿಜಾಥಾ ಹಾಗೂ ಸಮಾರಂಭ ಆಯೋಜಿಸಿ ಶಾಲಾ ಕಾಲೇಜುಗಳ ವದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ತಜ್ಞರಿಂದ ಭಾಷಣ ಏರ್ಪಡಿಸುವುದು.

ಮಧ್ಯಪಾನದಿಂದಗುವ ದುಷ್ಪರಿಣಾಮಗಳ ವಿವರ ಸಹಿತ ಗಣ್ಯರ ಹೇಳಿಕೆ, ಅಂಕಿ ಅಂಶಗಳೊಂದಿಗೆ ಮಾಹಿತಿ ಮುದ್ರಿಸಿ ಸಾರ್ವಜನಿಕರಿಗೆ ಹಾಗೂ ಯುವ ಜನತೆಗೆ ಹಂಚುವುದು. ಪ್ರತಿ ತಾಲೂಕಿನ ಎಲ್ಲ ಶಾಲಾ ಕಾಲೇಜು ವಿದ್ಯಾರ್ಥಿಗಳನ್ನು ಆಹದವಾನಿಸಿ ಜಾಥಾ ನಡೆಸುವುದು, ಭಿತ್ತಿ ಪತ್ರ ಹಾಗೂ ಬಟ್ಟೆ ಫ್ಲೆಕ್ಸ್ ಅಳವಡಿಸುವುದು.

ಸ್ಥಳೀಯ ಪತ್ರಿಕೆಗಳಲ್ಲಿ ಲೇಖನ ಹಾಕುವುದು, ಸಮಾರಂಭಗಳಲ್ಲಿ ಪ್ರತಿಜ್ಞಾವಿಧಿ ಬೋಧಿಸುವುದುಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಸಹಯೋಗದೊಂದಿಗೆ ವ್ಯಸನಮುಕ್ತ ಶಿಬಿರ ಏರ್ಪಡಿಸುವುದು ಕಡ್ಡಾಯ ಎಂದು ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧೀನ ಕಾರ್ಯದರ್ಶಿ ಎಂ.ಜಸಿಂತ್ ಹೊರಡಿಸಿದ ಆದೇಶದಲ್ಲಿ ತಿಳಿಸಿದ್ದಾರೆ.

78 ದಿನಗಳ ಕೋಮಾ ಪಯಣದಲ್ಲಿ ಸಾವು ಗೆದ್ದ ಯುವತಿ । ಚಿಕಿತ್ಸೆ ಬಳಿಕ ಕಾಲ್ನಡಿಗೆಯಲ್ಲಿ ಮನೆಗೆ

ಕೊಪ್ಪಳ ಜಿಲ್ಲಾಸ್ಪತ್ರೆಯ ವೈದ್ಯರ ಚಿಕಿತ್ಸಾ ಕಾಳಜಿಗೆ ಮರು ಜನ್ಮ ಪಡೆದ ಯುವತಿ

ಕೊಪ್ಪಳ : ಆತ್ಮಹತ್ಯೆಗೆ ಯತ್ನಿಸಿ ಕೋಮಾ ಸ್ಥಿತಿಗೆ ತಲುಪಿದ್ದ ಯುವತಿಗೆ ನಿರಂತರ 78 ದಿನಗಳ ಕಾಲ ಚಿಕಿತ್ಸೆ ನೀಡಿ, ಗಣಪಡಿಸುವ ಮೂಲಕ ಕೊಪ್ಪಳ ಜಿಲ್ಲಾಸ್ಪತ್ರೆಯ ವೈದ್ಯರು ಯುವತಿಗೆ ಮರು ಜೀವನ ನೀಡಿದ್ದಾರೆ. ಕ್ರಿಮಿನಾಶವನ್ನು ಸೇವಿಸಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದ 23 ವರ್ಷದ ಯುವತಿಯನ್ನು ಕುಷ್ಟಗಿ ತಾಲ್ಲೂಕು ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಪ್ರಾಥಮಿಕ ಚಿಕಿತ್ಸೆ ಬಳಿಕೆ ಹೆಚ್ಚಿನ ಚಿಕಿತ್ಸೆಗಾಗಿ ಅಲ್ಲಿಂದ ಕೊಪ್ಪಳಕ್ಕೆ ಕಳುಹಿಸಿಕೊಡಲಾಗಿದ್ದು, ಮೇ. 08ರಂದು ಯುವತಿಯನ್ನು ಕೊಪ್ಪಳ ಜಿಲ್ಲಾಸ್ಪತ್ರೆಗೆ ದಾಖಲಿಸಲ